ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೪೬

ರುಚಿ

ಎಸ್. ವಿ. ರಂಗಣ್ಣ, ಎಂ.ಎ.

ಮೈಸೂರು

…ು ವಿಶ್ವವಿದ್ಯಾನಿಲಯ

೧೯೫೩

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರ ಪ್ರವೇಶ—
ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೨. ಸಮಾಜದ ರೋಗ ರುಜಿನಗಳು—
ಜಿ. ಹನುಮಂತರಾವ್, ಎಂ.ಎ.

೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.

೪. ನವರತ್ನಗಳು—*ಎಚ್. ಸುಬ್ಬಜೋಯಿಸ್, ಎಂ.ಎಸ್‌ಸಿ.

೫. ನಮ್ಮ ಹಳ್ಳಿಗಳು—*ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.

೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಚಾರ್, ಎಂ.ಎ.

೮. ಕನ್ನಡಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.

೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್,
ಎಂ.ಎಸ್‌ಸಿ.

೧೦. ಪಂಪ—ತೀ. ನಂ. ಶ್ರೀಕಂಠಯ್ಯ, ಎಂ.ಎ.

೧೧. ಪ್ರಾಣಿಜೀವನ—*ಎ. ನಾರಾಯಣರಾವ್, ಎಂ.ಎಸ್‌ಸಿ.

೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.

೧೩. ಮದುವೆ—ನಾ. ಕಸ್ತೂರಿ. ಎಂ.ಎ., ಬಿ.ಎಲ್.

೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.

೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್,
ಎಂ.ಎಸ್‌ಸಿ., ಎಲ್‌ಎಲ್.ಬಿ.

೧೬. ಬೆಳಕು—*ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.

೧೭. ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.

೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್,
ಎಂ.ಎ.

೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—
ಪಿ. ಜಿ. ಸತ್ಯಗಿರಿನಾಥನ್, ಎಂ.ಎ.

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೪೬

ರುಚಿ

ಎಸ್. ವಿ. ರಂಗಣ್ಣ, ಎಂ. ಎ.

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೩

ಎರಡನೆಯ ಮುದ್ರಣ ೧೯೫೩
೩೦೦೦ ಪ್ರತಿಗಳು

ಮುದ್ರಕರು :
ಜಿ. ಎಚ್. ರಾಮರಾವ್, ಬಿ. ಎಸ್‌ಸಿ.
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

ಮುನ್ನುಡಿ

ಈ ಪ್ರಚಾರಪುಸ್ತಕ ಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚುವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯ ಕೈಕೊಂಡ ಈ ಹೊಸಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಿದೆಯೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು; ೧೧ ಭೌತ ಮತ್ತು ಜೀವವಿಜ್ಞಾನಗಳನ್ನು ಕುರಿತವು; ಉಳಿದವನ್ನು ಸಾಮಾಜಿಕಶಾಸ್ತ್ರಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮಾತಿಗೆ ಮನ್ನಣೆಯಿದೆಯೋ ಅಂಥ ಮಹನೀಯರು ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರಮಾಡಿಕೊಂಡಿದ್ದಾರೆ. ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟವಾಗುತ್ತವೆ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಪದವಿಯಿಂದ ಈಗತಾನೆ ವಿಶ್ರಾಂತಿ ಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು;

ಇದು ಯುಕ್ತವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವದನ್ನು ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದು ಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ನಾನು ಆಡದಿದ್ದರೆ ಲೋಪವಾದೀತು. ಸಂಪಾದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತಾಗಬಲ್ಲುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇನೆ.

ಮೈಸೂರು,
ತಾ|| ೨೪-೪-೧೯೪೨.

ಇ. ಜಿ. ಮೆಕಾಲ್ಪೈನ್
ವೈಸ್-ಛಾನ್ಸೆಲರ್

ಪೀಠಿಕೆ

೧೯೪೨ನೇ ಅಕ್ಟೋಬರ್ ತಿಂಗಳಿನಲ್ಲಿ ನಾನು ಮಾಗಡಿಯಲ್ಲಿ ಕೊಟ್ಟ ಉಪನ್ಯಾಸವೇ ಈ ಸಣ್ಣ ಪುಸ್ತಕಕ್ಕೆ ತಳಹದಿ. ಮನುಷ್ಯ ತನ್ನ ಬಾಳನ್ನು ನೆಮ್ಮದಿಯಿಂದಲೂ ಪರಿಪುಷ್ಟವಾಗಿಯೂ ಬಾಳಬೇಕೆಂದು ಹಲವು ಕಾರ್ಯಗಳಲ್ಲಿ ಉದ್ಯುಕ್ತನಾಗುತ್ತಾನೆ. ಮನೆ ಕಟ್ಟುವುದು, ಮರದ ಸಾಮಾನನ್ನು ತಯಾರಿಸುವುದು, ಅಡಿಗೆ ಮಾಡುವುದು, ಬಟ್ಟೆ ಹೊಲಿಯುವುದು, ಒಡವೆ ರಚಿಸುವುದು, ಯಂತ್ರ ನಡೆಸುವುದು, ಮುಂತಾದ ದಿನಚರಿ ಜೀವನದ ಕೃಷಿಗಳನ್ನು ಕೈಕೆಲಸಗಳೆಂದು ಕರೆಯುವ ವಾಡಿಕೆ. ಅವನ್ನು ಉಪಯುಕ್ತ ಕಲೆಗಳೆಂದೂ ಕರೆಯುವ ಪದ್ಧತಿಯುಂಟು. ವಾಸ್ತು ಶಿಲ್ಪ ನೃತ್ಯ ಚಿತ್ರ ಸಂಗೀತ ಕಾವ್ಯ ನಾಟಕ—ಈ ಏಳಕ್ಕೆ ಲಲಿತಕಲೆಗಳೆಂದು ಹೆಸರು. ಇವುಗಳಿಂದ ಬರುವ ಪ್ರಯೋಜನ ಸಾಮಾನ್ಯಾರ್ಥದ ಉಪಯೋಗವಲ್ಲ. ಆದರೂ ಇವು ಮನುಷ್ಯನಿಗೆ ಎಲ್ಲ ದೇಶದಲ್ಲಯೂ ಎಲ್ಲ ಕಾಲದಲ್ಲಿಯೂ ಅತ್ಯಗತ್ಯ. ಇವುಗಳ ಸ್ವಾರಸ್ಯವನ್ನು ಗ್ರಹಿಸಬೇಕಾದರೆ ನಮ್ಮಲ್ಲಿ ಸಮಂಜಸವಾದ ಕಲಾಭಿರುಚಿ ಸಿದ್ಧವಾಗಿರುವುದು ಆವಶ್ಯಕ. ಈ ವಿಚಾರವನ್ನು ಈ ಸಣ್ಣ ಪುಸ್ತಕದಲ್ಲಿ ಕೊಂಚಮಟ್ಟಿಗೆ ಪ್ರಸ್ತಾಪಿಸಿದೆ. ಪುಸ್ತಕದಲ್ಲಿ ಉದ್ದಕ್ಕೂ "ಕಲೆ" "ರುಚಿ" ಎಂಬ ಪದಗಳನ್ನೇ ಬಳಸಿಕೊಂಡಿದೆ: ಕಲೆ ಎಂದರೆ ಲಲಿತಕಲೆ, ರುಚಿ ಎಂದರೆ ಕಲಾಭಿರುಚಿ, ಈ ರೀತಿ ಓದುಗರು ಭಾವಿಸಿಕೊಳ್ಳಬೇಕೆಂದು ಬೇಡಿಕೆ.

ನನ್ನ ಕೋರಿಕೆಯಂತೆ ಮುದ್ದಾದ ಚಿತ್ರಗಳನ್ನು ರಚಿಸಿ ಕೊಟ್ಟ ನನ್ನ ಮಿತ್ರರು, ಡಾಕ್ಟರ್ ಎಸ್. ಬಿ. ಕೌಶಿಕ್, ಅವರಿಗೆ ನಾನು ಚಿರಋಣಿ.

ಈ ಪುಸ್ತಕವನ್ನು ಆದರದಿಂದ ಹೊರತಂದ ಮುಖ್ಯ ಸಂಪಾದಕರು, ಶ್ರೀಮಾನ್ ಜಿ. ಹನುಮಂತರಾಯರಿಗೂ, ಚೆಲುವಾಗಿ ಅಚ್ಚು ಮಾಡಿದ ಮೈಸೂರು ಮುದ್ರಣಶಾಲೆಯವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಮೈಸೂರು
೨೮_೮_೧೯೫೩

ಎಸ್. ವಿ. ರಂಗಣ್ಣ.

ವಿಷಯಾನುಕ್ರಮಣಿಕೆ

ಕಲೆಯ ಅವಶ್ಯಕತೆ	....	೧
ಕಲಾಭಿರುಚಿ ಎಲ್ಲರಲ್ಲಿಯೂ ಉಂಟು	....	೬
ರುಚಿಯ ನಿಷ್ಕರ್ಷೆ	....	೧೦
"ಲೋಕೋ ಭಿನ್ನರುಚಿಃ"	....	೧೩
ಒಳ್ಳೆಯ ರುಚಿ	....	೨೩
ರುಚಿಯ ಪೋಷಣೆ	....	೩೪
ಫಲ ನಿರೂಪಣೆ	....	೬೨

ರುಚಿ

೧ ಕಲೆಯ ಆವಶ್ಯಕತೆ

ಲಂಡನ್ ನಗರದಲ್ಲಿ ಒಂದುಸಾರಿ ಕೆಲವು ಎಳೆಯ ವಿದ್ಯಾರ್ಥಿಗಳನ್ನು "ಕಲೆಗಾರರು ಏತಕ್ಕೆ ಚಿತ್ರಗಳನ್ನು ರಚಿಸುತ್ತಾರೆ?" ಎಂದು ಕೇಳಿದರು. ನಾನಾಬಗೆಯ ಉತ್ತರಗಳು ಬಂದುವು. ಒಬ್ಬ ಹುಡುಗ "ಅವರು ಬೇರೆ ಯಾವ ಕೆಲಸವನ್ನೂ ಮಾಡಲಾರರು, ಅದಕ್ಕೋಸ್ಕರ" ಎಂದು ಹೇಳಿದ. ಆ ಹುಡುಗನ ತೀರ್ಪನ್ನು ಒಪ್ಪುವುದಾದರೆ ಕಲೆಗಾರರು ಯಾವ ಉಪಯುಕ್ತವಾದ ಕಸಬಿಗೂ ಅರ್ಹರಲ್ಲ; ಕೇವಲ ಹಿಟ್ಟು ದಂಡದ ಸೋಮಾರಿಗಳು; ಕಾಲವನ್ನು ಹೇಗಾದರೂ ಕಳೆಯಬೇಕಾಗಿರುವುದರಿಂದ ಗುಡಿಕಟ್ಟುವುದನ್ನೊ ಸಂಗೀತಹೇಳುವುದನ್ನೊ ಕಾವ್ಯಬರೆಯುವುದನ್ನೊ ಅವರು ಕೈಗೊಳ್ಳುತ್ತಾರೆ. ವಯಸ್ಕರಲ್ಲಿಯೂ ಈ ತೆರದ ಆಲೋಚನೆ ಇಲ್ಲದೆ ಇಲ್ಲ. ಫ್ರೆಂಚ್ ಸಾಹಿತಿಯಾದ ವಾಲ್ಟೇರನ ತಂದೆಯೂ ಇಂಗ್ಲಿಷ್ ಸಾಹಿತಿಯಾದ ಸ್ಟೀವನ್‌ಸನ್ನನ ತಂದೆಯೂ ತಮ್ಮ ಪುತ್ರರನ್ನು ಸಾಹಿತ್ಯ ವ್ಯಾಪಾರದಿಂದ ತಪ್ಪಿಸಲು ವಿಶೇಷ ಪ್ರಯತ್ನ ಪಟ್ಟರು; ದೇವರ ದಯದಿಂದ ಅವರ ಪ್ರಯತ್ನ ಫಲಿಸಲಿಲ್ಲ. ಹ್ಯಾಂಡೆಲನಿಗೆ ಬಾಲ್ಯದಿಂದಲೂ ಸಂಗೀತವೆಂದರೆ ಪ್ರಾಣ; ಅವನ ತಂದೆಯಾದರೋ ಅವನನ್ನು ವಕೀಲವೃತ್ತಿಗೆ ಸೇರಿಸಬೇಕೆಂದು ಹಟಹಿಡಿದಿದ್ದ. ತಾಯಿಯ ನೆರವಿನಿಂದ ಕಳ್ಳತನದಲ್ಲಿ ಅಟ್ಟದ ಮೇಲೆ ಕುಳಿತು ಆ ಬಾಲಕ ತನ್ನ ಸಂಗೀತವನ್ನು ಅಭ್ಯಾಸಮಾಡಬೇಕಾಯ್ತು. ಜನತೆಯಲ್ಲಿ ಕಲೆಗಾರರು ನಿಷ್ಪ್ರಯೋಜಕರು ಎಂಬ ತಾತ್ಸಾರ

ವಷ್ಟೇ ಅಲ್ಲ. ಕಲೆ ಎಂಬುದು ಅತಿ ಸುಲಭವಾದ, ಚಿಟಿಕಿಯಲ್ಲಿ ಮಾಡಿ ಮುಗಿಸಬಹುದಾದ, ಗಾಳಿಯಲ್ಲಿ ತೂರಿಹೋಗುವ ಹಗುರ ಪದಾರ್ಥ; ಆದರಿಂದ ಬದುಕಿಗೆ ಯಾವ ಉತ್ಕೃಷ್ಟ ಉಪಕಾರ ಉಂಟಾದೀತು? ಎಂಬ ಕೀಳಭಿಪ್ರಾಯ ಬೇರೆ. ಸಾಮಾನ್ಯ ಮಂದಿ ಹೋಗಲಿ: ವಿದ್ಯಾವಂತರಲ್ಲಿಯೂ ಹೀಗಿರುವುದು ಶೋಚನೀಯ. ಇಂಗ್ಲೆಂಡ್ ಸರ್ಕಾರದ ಮುಖ್ಯ ವಕೀಲನೊಬ್ಬ ಪ್ರಸಿದ್ಧ ಚಿತ್ರಗಾರನಾದ ವಿಸ್ಲರ್‌ನನ್ನು ಒಂದು ವ್ಯವಹಾರ ನಡೆಯುತ್ತಿದ್ದಾಗ ಠೀವಿಯಿಂದ ಕೇಳಿದ: "ಒಂದೆರಡು ದಿವಸದ ಕೆಲಸಕ್ಕೆ ನೀನು ಇನ್ನೂರು ಗಿನಿ ಮೌಲ್ಯವನ್ನು ಅಪೇಕ್ಷಿಸುತ್ತೀಯಾ?" ಅದಕ್ಕೆ ವಿಸ್ಲರ್ ಕೊಟ್ಟ ಜವಾಬು ಗಾದೆಯಾಗಿ ಹೋಗಿದೆ: "ಒಂದೆರಡು ದಿವಸದ ಕೆಲಸಕ್ಕಲ್ಲ; ಒಂದು ಜೀವಮಾನದ ಜ್ಞಾನಕ್ಕೆ." ಹಿಂದಿನಿಂದಲೂ ವಾಸ್ತು ಶಿಲ್ಪ ನೃತ್ಯ ಚಿತ್ರ ಸಂಗೀತ ಕಾವ್ಯ ನಾಟಕಗಳನ್ನು ಕಡೆಗಣ್ಣಿನಿಂದ ನೋಡುವುದೇ ಜನಸಮುದಾಯದ ವಾಡಿಕೆ. ಆ ಏಳು ಲಲಿತಕಲೆಗಳನ್ನು ಒಪ್ಪಿ ಮೆಚ್ಚಿ ಅನುಭವಿಸಿ ತೃಪ್ತರೂ ಕೃತಜ್ಞರೂ ಆಗುವ ಮನುಷ್ಯರು ಅತಿ ವಿರಳ. ಇಲ್ಲಿನವರೆಗೂ ಈಚೀಚೆಗೂ ಕೂಡ ಕಲೆ ಹಲಕೆಲವರಿಗೆ ಮಾತ್ರ ಅನ್ವಯಿಸುವ ಒಂದು ವಿಚಿತ್ರ ಲಾಲಸೆ; ಆದ್ದರಿಂದ ಅದು ಜನಜೀವನ ಕಂಬಳಿಯ ಮೈಯಿನ ಒಂದು ಭಾಗವಲ್ಲ, ಸೆರಗಿನ ಒಂದು ಭಾಗವೂ ಅಲ್ಲ, ಸೆರಗಿನ ತುದಿಯ ಕಶೆ ಅಷ್ಟೆ, ಎಂಬ ಭಾವನೆ ಯೂರೋಪಿನಲ್ಲಿ ನೆಲಸಿತ್ತು. ಯಾವನೋ ಅನಾಮಧೇಯ ಬೇಜವಾಬ್ದಾರಿಯಿಂದ ಎಂದ ಮಾತಲ್ಲ ಇದು; ಅಧಿಕಾರಯುತವಾಗಿ ಪ್ರಕಟಿಸಿದ ಬೃಹನ್ನಿಘಂಟುವಿನಲ್ಲಿ ಕಲೆಯೆಂಬ ಪದದ ಶಾಸ್ತ್ರೀಯವಾದ ವಿವರಣೆ! ದಾರ್ಶನಿಕ ಸ್ಕೋಫೆನ್‌ಹೌರ್ ಅದೇ

ಅಭಿಪ್ರಾಯವನ್ನು ಸೂಚಿಸಿದ: "ಉಪಯುಕ್ತ ಕಲೆಗಳಿಗೆ ತಾಯಿ ಆವಶ್ಯಕತೆ, ಲಲಿತಕಲೆಗಳಿಗೆ ತಾಯಿ ವೈಭವಾಸಕ್ತಿ." ಹತ್ತೊಂಭತ್ತನೇಶತಮಾನದಲ್ಲಿ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಒಂದು ಪ್ರಧಾನತತ್ತ್ವವನ್ನುರಸ್ಕಿನ್, ಮಾರಿಸ್ ಮುಂತಾದ ಆಲೋಚನಾಪರರು ಕಂಡುಹಿಡಿದರು: ಮಾನವನ ಬಾಳಿಗೆ ಗಾಳಿ ನೀರು ಅನ್ನ ಬಟ್ಟೆಗಳು ಹೇಗೋ ಹಾಗೆ ಕಲೆಯೂ ಅತ್ಯಾವಶ್ಯಕವೆಂಬ ತತ್ತ್ವ. ಕಲೆಯಿಲ್ಲದ ಸಮಾಜದಲ್ಲಿ ಕಷ್ಟ ವ್ಯಸನಗಳು ಖಂಡಿತ; ಕಲೆಯಿಲ್ಲದ ಜೀವನ ಮರುಭೂಮಿಯ ಜೀವನಕ್ಕಿಂತ ಕಠಿಣ: ಎಂಬ ಕೂಗು ಎಲ್ಲೆಲ್ಲಿಯೂ ಕೇಳಲಾರಂಭಿಸಿತು. ಸ್ವಯಂಪ್ರತ್ಯಕ್ಷವಾದ ಈ ಸಂಗತಿಯನ್ನು ಗೊತ್ತು ಹಚ್ಚಲು ಇಷ್ಟುದಿನ ಬೇಕೆ? ಕೌತುಕಕ್ಕೆ ಕಾರಣವಿಲ್ಲ; ಸತ್ಯದ ಚರಿತ್ರೆ ಯಾವಾಗಲೂ ಇದೇ ಕಥೆ. ಅದು ಪರಿಚಯವಾದ ಮೇಲೆ, "ಅಯ್ಯೊ, ವಿಚಾರ ಇಷ್ಟು ಸರಳವಾದ್ದೆ! ಮುಂಚೆ ಏತಕ್ಕೆ ಇದು ನಮ್ಮ ಮನಸ್ಸಿಗೆ ಬರಲಿಲ್ಲ?" ಎನ್ನುತ್ತೇವೆ. ಕೊಂಚ ಪರಿಶೀಲಿಸೋಣ. ತೊಂದರೆಗೆ ಎದೆಗುಂದದೆ, ಆಸಕ್ತಿಯಿಂದ, ಮನಸ್ಸಿಟ್ಟು ಒಂದು ಕಾವ್ಯವನ್ನು ಓದಿದರೆ, ಒಂದು ಸಂಗೀತವನ್ನು ಕೇಳಿದರೆ, ಒಂದು ಚಿತ್ರವನ್ನು ನೋಡಿದರೆ, ಅದರಲ್ಲಿ ಅಡಗಿದೆ ಯಾವುದೋ ನವೀನ ಸೌಂದರ್ಯ, ಅದರಿಂದ ಲಭಿಸುತ್ತದೆ ನಮ್ಮಚೇತನಕ್ಕೆ ಅಚ್ಚರಿಯ ಸಂತೃಪ್ತಿ, ಎಂಬುದು ನಮಗೆ ಭಾಸವಾಗದೇ ಇರದು. ಹತ್ತಿರವಿದ್ದರೂ ದೂರವಾಗಿರುವ, ಗೊತ್ತಾಗಬಹುದಾದರೂ ಗೊತ್ತಾಗದಿರುವ ಒಂದು ಹೊಸ-ಹಳೆಯ ರಮ್ಯತೆ ನಮಗೆ ಗೋಚರವಾಗುತ್ತದೆ ಕಲೆಯ ದೆಸೆಯಿಂದ. ಕಲೆ ನಮಗೆ ಬೇಡವೆಂದರೆ ಹಿತವೂ ನೂತನವೂ ಆದ ವಿಶೇಷಲಾವಣ್ಯವೊಂದು ನಮಗೆ ಬೇಡ

ಎಂದಂತೆ. ಕಲೆ ಹೊರಸೂಸುವ ಈ ಲಾವಣ್ಯ ಮರ್ತ್ಯಲೋಕದ ಕಾಮಧೇನು. ಅದರ ಕೆಚ್ಚಲಿನಿಂದ ಆದರ್ಶಲೋಕದ ಅನುಭವ, ಆನಂದ, ಆತ್ಮಪುಷ್ಟಿ, ಅಂತರ್ಯವಿಕಾಸ—ಈ ನಾಲ್ಕು ಕ್ಷೀರಧಾರೆಗಳು ಸಂತತವಾಗಿ ಹರಿಯುತ್ತವೆ. ಅದನ್ನು ಅಲಕ್ಷಿಸುವುದು ಅತ್ಯಂತ ಮೌಢ್ಯವಲ್ಲವೆ? ಒಬ್ಬ ಶ್ರೀಮಂತ ತನ್ನ ಉದ್ಯಾನದಲ್ಲಿ ತಿರುಗಾಡುವಾಗ ಕುಸುಮಗಳನ್ನು ಕಂಡೊಡನೆ ತನ್ನ ದೊಣ್ಣೆಯಿಂದ ಅವನ್ನು ಬಡಿದು ಕೆಡವಿ, ತೋಟಗಾರನನ್ನು ಕರೆದು, "ಇವನ್ನೇಕೆ ಬೆಳೆಯುತ್ತಿ; ಏನು ಉಪಯೋಗ ಇವುಗಳಿಂದ? ಆಲೂಗೆಡ್ಡೆಯನ್ನು ಬೆಳೆ!" ಎಂದು ಗಜರುತ್ತಿದ್ದನಂತೆ. ಆತನಿಗೆ ಬುದ್ಧಿ ನೆಟ್ಟಗಿತ್ತೊ ಇಲ್ಲವೊ ಹೇಳುವುದು ಕಷ್ಟ. ಆದರೆ ಆ ಬೂದಿಹೃದಯನ ಗೋತ್ರಕ್ಕೆ ಸೇರಿದವರು ಹೆಚ್ಚಾಗಿಲ್ಲ. ಚೀಣಾದೇಶದಲ್ಲಿ ಈ ಸೂಕ್ತಿ ಬಳಕೆಯಲ್ಲಿದೆ; "ಎರಡು ರೊಟ್ಟಿ ನಿನ್ನ ಬಳಿ ಇದ್ದರೆ ಒಂದನ್ನು ಮಾರಿ ಒಂದು ಕನ್ನೈದಿಲೆಯನ್ನು ಕೊಂಡುಕೊ!" ಹೂ, ಬಳ್ಳಿ, ಹಸುರೆಲೆ, ರಂಗವಲ್ಲಿ, ಸುಣ್ಣ, ಬಣ್ಣ, ಹರಿಯುವ ನೀರು, ಜಲಪಾತ, ತಂಗಾಳಿ, ಅರುಣೋದಯ, ಸೂರ್ಯಾಸ್ತ, ಚಂದ್ರ, ಕಂದಯ್ಯ, ಮೊದಲಾದ ಅಂದಚಂದದ ವಸ್ತುಗಳನ್ನು ಕಂಡು ಯಾರು ತಾನೇ ಹರುಷದಿಂದ ಹಿಗ್ಗುವುದಿಲ್ಲ? ರಕ್ತಪಾತಕ್ಕೆ ಹಿಂಜರಿಯದ ಸಿಪಾಯಿಗೂ ಲಕ್ಷಣವಾಗಿ ಹೊಲಿದು ವಿರು ಗುಟ್ಟುವಂತೆ ಇಸ್ತ್ರಿಮಾಡಿದ ಉಡುಪೇ ಬೇಕು. ಯೂರೋಪಿನ ಪಟ್ಟಣಗಳಲ್ಲಿ ಬಡವರ ಕೇರಿಗಳಲ್ಲಿಯೂ ಕೂಡ ಮನೆಯ ಮುಂದೆ ಒಂದು ಲತೆ ಹಬ್ಬಿದ್ದರೆ ಆ ಮನೆಗೆ ಹೆಚ್ಚು ಬಾಡಿಗೆಯನ್ನು ಉಲ್ಲಾಸದಿಂದ ಕೊಡುತ್ತಾರಂತೆ ಕೂಲಿನಾಲಿ ಮಾಡಿ ಜೀವಿಸುವ ಜನ. ಜಗತ್ತಿನಲ್ಲಿ ಎಷ್ಟೊಂದು ವಿಚಿತ್ರ

ವಿಸ್ಮಯಗಳು ನಮ್ಮ ಮುಂದೆ ಕಾಲಕಾಲಕ್ಕೆ ಬಂದು ನಿಲ್ಲುತ್ತವೆ ಭಾವಿಸಿ. ಥಳಥಳಿಸುವ ನಕ್ಷತ್ರಮಂಡಲ, ಬಾಂದಳದಲ್ಲಿ ಕಣ್ಣು ಮುಚ್ಚಾಲೆಯಾಡುವ ಸೂರ್ಯಚಂದ್ರರು, ದಟ್ಟವಾದ ಕಾಡು, ನೀಳವಾಗಿ ನಿಂತ ಬೆಟ್ಟ, ನಕ್ಕು ನಲಿಯುವ ವಸಂತಋತು, ಮಾಗಿ ಮೃದುವಾದ ಶರದೃತು, ಹರಿದಾಡುವ ಕ್ರಿಮಿಕೀಟ, ಓಡಾಡುವ ಪ್ರಾಣಿ, ಹಾರಾಡುವ ಹಕ್ಕಿ, ಕಣ್ಣಿಗೆ ಹಬ್ಬವಾದ ನೋಟ, ಕಿವಿಗೆ ಸುಧೆಯೆನಿಸುವ ನಾದ, ಮೂಗನ್ನು ಮರುಳು ಗೊಳಿಸುವ ವಾಸನೆ, ನಾಲಗೆಯಿಂದ ಹೋ ಸಾಕು! ಎಂಬ ನುಡಿಯನ್ನು ಹೊರಡಿಸುವ ಸಿಹಿ, ಮುಂತಾದ ನಾನಾ ಮಾಧುರ್ಯಗಳಿಂದ ತುಂಬಿ ವಸುಮತಿಯನ್ನು ಕಲಾಪತಿಯ ನ್ನಾಗಿ ಮಾಡಿದ್ದಾಳೆ ಪ್ರಕೃತಿಮಾತೆ. ಅಸಾಧಾರಣವೂ ಸ್ವಾಭಾ ವಿಕವೂ ಆದ ಕಲಾಕೌಶಲಗಳ ವಿಶಾಲ ಬೊಕ್ಕಸ ಈ ವಿಶ್ವ. ಮಾನವವರ್ಗಕ್ಕೋ ಎಂದರೆ ಇಂದ್ರಿಯಗಳು ಮನಸ್ಸು ಬುದ್ಧಿ ಹೃದಯ ಆತ್ಮವೆಂಬ ಉತ್ತಮ ಉಪಕರಣಗಳು ಬಳುವಳಿ ಯಾಗಿ ಬಂದಿವೆ. ನಮ್ಮ ಹೊರಗೆ ಸೊಬಗಿನ ಮನೋಹರತ್ವ, ನಮ್ಮ ಒಳಗೆ ಸಂತಸಪಡುವ ಮನೋರಥ: ಹಲ್ಲಿರುವವನಿಗೇ ಕಡಲೆ ದೊರತಂತೆ. ಹೇಗಿದೆ ಯೋಚಿಸಿ ಜಗನ್ನಿಯಾಮಕನ ದಿವ್ಯಯೋಜನೆ! ಇದರಿಂದ ಮನುಷ್ಯ ಸಹಜವಾಗಿ ಸೌಂದ ರ್ಯಾಪೇಕ್ಷಿ ಎಂದಂತಾಯ್ತು. ಅಂದಮೇಲೆ ಸೌಂದರ್ಯದ ಭಾರಿ ಸಾಮ್ರಾಜ್ಯವಾದ ಲಲಿತಕಲೆಯೂ ಅವನಿಗೆ ಅಗತ್ಯ ಎಂದಂ ತೆಯೇ ಅಲ್ಲವೆ?

೨ ಕಲಾಭಿರುಚಿ ಎಲ್ಲರಲ್ಲಿಯೂ ಉಂಟು

ಚೆಲುವಿನ ಬಯಕೆ ಎಲ್ಲರಲ್ಲಿಯೂ ಉಂಟೆಂಬುದು ನಿರ್ವಿವಾದ. ಮನೆಯ ಪಟಗಿಟ ಪಾತ್ರೆ ಪರಟ ವಲ್ಲಿ ಪಂಚೆ ಕೋಟು ಕನ್ನಡಿಗಳನ್ನು ಒಪ್ಪುವಂತಿಟ್ಟು, ನೆಲವನ್ನು ಗುಡಿಸಿ ಚೊಕ್ಕಟ ಮಾಡಿ, ಹೊಸ್ತಿಲ ಮುಂದೆ ರಂಗವಲ್ಲಿಯನ್ನು ಹಾಕಿ, ಗೋಡೆಗಳಿಗೆ ಕಾರಣೆ ಬಳಿದು, ಬಟ್ಟೆಬರೆಗಳನ್ನು ಬೆಳ್ಳಗೆ ಒಗೆದು ಧರಿಸಿ, ಹದವಾದ ಆಹಾರವನ್ನು ತೊಳೆದು ಬೆಳಗುವ ತಟ್ಟೆಗಳಲ್ಲಿ ಊಟಮಾಡಿ, ಶುಭ್ರವಾದ ಹಾಸಿಗೆಯಲ್ಲಿ ಮಲಗಿ ನಿದ್ರಿಸಲು ಪ್ರತಿಯೊಬ್ಬನೂ ಹಾತೊರೆಯುವುದೇ ಅದಕ್ಕೆ ಸಾಕ್ಷಿ. ಆದರೆ ಈ ರೀತಿ ದಿನಚರಿ ಜೀವನದ ಧ್ಯೇಯವಾದ ಏಕಮುಖದ ಸರಳ ಸೊಗಸಿಗೂ ಕಲೆ ತನ್ನಲ್ಲಿ ಬಚ್ಚಿಟ್ಟುಕೊಂಡಿರುವ ಬಹುಮುಖದ ಗಹನ ಶೃಂಗಾರಕ್ಕೂ ವ್ಯತ್ಯಾಸವಿಲ್ಲವೆ? ವೇದವೇದಾಂತಗಳ ಗೂಢಾರ್ಥವನ್ನು ಗುರುಮುಖದಲ್ಲಿ ಅಧಿಕ ಕಾಲ ವ್ಯಾಸಂಗಮಾಡಿದ ಶಾಸ್ತ್ರಜ್ಞ ಬಲ್ಲ. ಹಾಗೆಯೇ ಕಲೆಯ ರಹಸ್ಯರಂಜನೆಯನ್ನು ಭೇದಿಸುವುದು ರಸಿಕನಿಗೆ ಸಾಧ್ಯ ; ಇತರರಿಗೆ ಅದು ಹೇಗೆ ಸಾಧ್ಯ ? ಕಲೆಯ ಸ್ವಾರಸ್ಯವನ್ನು ಗ್ರಹಿಸಲು ಜನಸಾಮಾನ್ಯರು ಅರ್ಹರೇ ? ಉದರಪೋಷಣೆಯ ದುರ್ಭರ ವ್ಯವಸಾಯದಲ್ಲಿ ಸದಾ ನಿರತರಾಗಿರುವ ಅವರಿಗೆ ರಸಾಮೃತವನ್ನು ಕುಡಿಯುವ ಮನಸ್ಸುಂಟೆ, ಮಾರ್ಗವುಂಟೆ ? ಈ ವಿಚಾರವನ್ನು ಕುರಿತು ಎರಡು ತೀವ್ರಮತಗಳಿವೆ. ಮೊದಲನೆಯದು ಹೀಗೆ ಹೇಳುತ್ತದೆ. ಕಲೆ ನಿಶ್ಚಯವಾಗಿಯೂ ಮೇಧಾವಿಗಳಿಗೆ ವಿದ್ವಾಂಸರಿಗೆ ರಸಜ್ಞರಿಗೆ ದತ್ತವಾದ ದೊಡ್ಡ ಆಸ್ತಿ; ಇತರ ಯಾವ ಪ್ರಜೆಗೂ ಅದರ ಮೇಲೆ ಎಳ್ಳಷ್ಟು ಹಕ್ಕಿಲ್ಲ. ಕನ್ನಡ ಕವಿ ಜನ್ನ ಕೇಳಿದ : "ದೇವಾನಾಂ ಪ್ರಿಯಗ

ವಿಷಯಮೋ ಸತ್ಕಾವ್ಯಂ?" ಇನ್ನೊಬ್ಬ ಕನ್ನಡ ಕವಿ ಇನ್ನೂ ಹೆಚ್ಚಿನ ಗರ್ವದಿಂದ ಹಂಗಿಸುತ್ತಾನೆ: "ಪಂಡಿತರುಂ ವಿವಿಧ ಕಳಾ ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ಕಂಡರ್ ಕೇಳ್ವೊಡೆ ಗೊರವರ ಡುಂಡುಚಿಯೇ ಬೀದಿವಱಿಯ ಬೀರನ ಕತೆಯೇ?" ಸಾಧಾರಣ ಮನುಷ್ಯ ಸಾಹಿತ್ಯವನ್ನು ಸ್ವೀಕರಿಸುವನೆಂಬಮಾತು ಸಂಸ್ಕೃತದ ಜಗನ್ನಾಥಕವಿಗೆ ಗೇಲಿಯೋ ಗೇಲಿ:"ಹಾರಂ ವಕ್ಷಸಿ ಕೇನಾಪಿ ದತ್ತಮಜ್ಞೇನ ಮರ್ಕಟಃ। ಲೇಢಿ ಜಿಘ್ರತಿ ಸಂಕ್ಷಿಪ್ಯ ಕರೋತ್ಯುನ್ನತಮಾನನಮ್ ‖" ಪಾಶ್ಚಾತ್ಯರಲ್ಲಿ ಒಂದು ಗಾದೆಯಿದೆ: "ಹಂದಿಯ ಎದುರು ಮುತ್ತುಗಳನ್ನು ಎರಚಿದಹಾಗೆ". ನಮ್ಮಲ್ಲಿರುವ "ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ" ಎಂಬ ನಾಣ್ಣುಡಿಯಲ್ಲಿಯೂ ಅದೇ ತಾತ್ಪರ್ಯ. ಈ ಅಭಿಪ್ರಾಯವನ್ನು ವಿರೋಧಿಸಿ ಎರಡನೇ ಮತ ಹೀಗೆ ಸಾರುತ್ತದೆ. ಕಲೆ ಸಮಾಜದ ಸಾರ್ವಜನಿಕ ಸೊತ್ತು; ಅದಕ್ಕೆ ಸರಿಯಾಗಿ ಬೆಲೆ ಕಟ್ಟತಕ್ಕವರು ಕಡೆಯಲ್ಲಿ ಸಮಾಜದ ಸಾಮಾನ್ಯ ಸದಸ್ಯರೆ. ಆರ್ನಲ್ಡ್ ಬೆನೆಟ್ ಒಂದು ಕಡೆ ಆತಂಕವಿಲ್ಲದೆ ಆಡಿದ್ದಾನೆ ಈ ವಚನವನ್ನ: "ನಾಟಕ ಒಂದು ಸರಕು; ನಾಟಕಪ್ರದರ್ಶಕ ಒಬ್ಬ ವ್ಯಾಪಾರಗಾರ. ಪ್ರೇಕ್ಷಕರಿಗೆ ಹಿಡಿಯುವ ಮಾಲನ್ನು ಅವನು ಮಾರಬೇಕು. ಒಂದು ನಾಟಕವನ್ನು ಅವರು ಒಪ್ಪದೇ ಹೋದರೆ ಅವರ ತೀರ್ಮಾನಕ್ಕೆ ತಲೆಬಾಗಿ ಮತ್ತೊಂದನ್ನು ಕೂಡಲೇ ಒದಗಿಸುವುದು ಅವನ ಕರ್ತವ್ಯ." ಮೇರಿ ಕಾರೆಲಿ ಒಂದು ಬಾರಿ ಮಾತನಾಡುತ್ತ, "ಜನತೆಯೇ ಶ್ರೇಷ್ಠ ವಿಮರ್ಶಕ" ಎಂಬ ಸೂತ್ರವನ್ನು ಸಾರಿದಳು. ರಾಜನೂ ಕವಿಯೂ ಆದ ನೃಪತುಂಗ ೯ನೇ ಶತಮಾನದ

ಕನ್ನಡ ದೇಶವನ್ನು ಬಣ್ಣಿಸುತ್ತ, “ಆ ನಾಡವರ್ ಚದುರರ್ ಕುಱಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್” ಎಂದೂ, ಕಾವ್ಯದಲ್ಲಿ ಒಂದಿಷ್ಟು ದೋಷವಿದ್ದರೆ ಅದನ್ನು ಅವರು “ಕೆಡೆನುಡಿವರ್” ಎಂದೂ ಹೊಗಳಲಿಲ್ಲವೆ? ಆದರೆ ಇದು ಬರಿಯ ಬಾಯುಪಚಾರದ ಭಾಷೆ. ನರನಾವನೂ ತನ್ನ ನೈಸರ್ಗಿಕ ಮಾನವತೆಯಿಂದಲೇ ಕಲೆಯ ನೆರಳಿಗೆ ಹಾರಲಾರ; ಹಾಗೂ ಕಲೆಯ ನೆರಳಿನಿಂದ ನರನಾವನೂ ಬಾಹಿರನಲ್ಲ. ಈ ವಿಚಾರದಲ್ಲಿ ಸತ್ಯಾಂಶ ಅತಿಶಯ ನುತಿಯ ಲ್ಲಿಯೂ ಇಲ್ಲ, ಅತಿಶಯ ನಿಂದೆಯಲ್ಲಿಯೂ ಇಲ್ಲ; ಎರಡಕ್ಕೂ ಮಧ್ಯದ ಮಿತವಾದದಲ್ಲಿ ಅಡಗಿದೆ. ಕಲೆಯ ಸತ್ವವಾದ ಸೂಕ್ಷ್ಮ ಸೌಂದರ್ಯವನ್ನು ಅರಿಯುವ ಶಕ್ತಿ ಮಂಕ ಹುಚ್ಚರ ಹೊರತು ಉಳಿದ ಎಲ್ಲರಲ್ಲಿಯೂ ಇದೆ. ಅಂದರೆ ಅದೊಂದು ಅಣುಬೀಜ ದಂತೆ ಹೃದಯಾಂತರಾಳದಲ್ಲಿ ಹುದುಗಿಕೊಂಡಿದೆ. ಅವನ್ನು ಕಂಡುಹಿಡಿದು, ಕಾಪಾಡಿ, ಅದಕ್ಕೆ ನೀರೆರೆದು, ಗೊಬ್ಬರಹಾಕಿ, ಬೆಳೆಸಿದಲ್ಲಿ ಅದು ಹಸನಾದ ಕಲಾಭಿರುಚಿ ಆಗುತ್ತದೆ. ಹಾಗೆ ಕೃಷಿಗೈಯದಿದ್ದರೆ ಆ ಶಕ್ತಿ ಮನುಷ್ಯನ ಪಾಲಿಗೆ ಇಲ್ಲದಂತೆಯೇ. ಜಗನ್ನಾಥನೇ ಇನ್ನೊಂದು ಕಡೆ ಹೇಳುವಂತೆ, ಉತ್ತಮ ಕಲೆ ಯನ್ನ ನೋಡಿ “ಅಧುನ್ವನ್ ಮೂರ್ಧಾನಂ ನೃಪಶುಃ ಅಥ ವಾಯಂ ಪಶುಪತಿಃ”. ಮೆಚ್ಚಿ ತಲೆಯನ್ನಲ್ಲಾಡಿಸದಿರುವುದು ಆನಂದದ ಗಂಧವನ್ನೇ ಅರಿಯದ ನರಪಶುವಿಗೆ ಶಕ್ಯ; ಅಥವಾ ತಾನೇ ಆನಂದಮಯನಾಗಿ ರಾಗಮೋಹಗಳನ್ನು ಮೀರಿದ ಪರ ಮೇಶ್ವರನಿಗೆ ಶಕ್ಯ. ಗಂಗಾ ಹಿಮಾಲಯಗಳನ್ನು ಸಂದರ್ಶಿಸುವ ಆಕಾಂಕ್ಷೆ ಯಾವ ಭಾರತೀಯನಿಗಿಲ್ಲ? ಧೈರ್ಯದಿಂದ ಸಂಕಲ್ಪ ಮಾಡಿ ಕಷ್ಟಕ್ಕೆ ಸಿದ್ಧನಾಗಿ ನಡೆಯುವ ಯಾವ ಭಾರತೀಯನಿಗೆ

ಅವನ್ನು ಸಲ್ಲಿಸಿಕೊಳ್ಳುವುದು ಅಸಾಧ್ಯ ? ಕಲೆಯ ವಿಷಯವೂ ಹಾಗೆಯೇ ಸರಿ. ಕಲೆ ಎಂದರೆ ಯಾವುದು? ಸೃಷ್ಟಿಕಾರ್ಯದಲ್ಲಿ ಪ್ರಕೃತಿಯೊಡನೆ ಪ್ರಿಯ ಹೋರಾಟವನ್ನು ಹೂಡುವ ಅಪೂರ್ವ ಸಾಮರ್ಥ್ಯ ಕೆಲವು ಆರಿಸಿದ ವ್ಯಕ್ತಿಗಳಿಗುಂಟು. ಅವರ ಕೃತಿಯೇ ಕಲೆ. ಪ್ರಕೃತಿ ನಿರ್ಮಿಸುವ ಬೆಡಗಿನ ಸೋಜಿಗ ಪ್ರಪಂಚ; ಪ್ರತಿಭಾಶಾಲಿ ನಿರ್ಮಿಸುವ ಬೆಡಗಿನ ಸೋಜಿಗ ಕಲೆ. ಚಾಚೂ ತಪ್ಪದಂತೆ ಪ್ರಕೃತಿಯ ನಕಲನ್ನು ತಯಾರಿಸುವುದಲ್ಲ ಕಲೆಯ ಕಸಬು. ಏತಕ್ಕೆಂದರೆ ಪ್ರಕೃತಿಯಲ್ಲಿ ಕಾಣಬರುವ ಲಾವಣ್ಯ ಎಂದಿಗೂ ಪರಿಪೂರ್ಣವಲ್ಲ; ಆದರಲ್ಲಿ ಕ್ಷಣಿಕವೂ ಅಸಂಗತವೂ ಕುರೂಪವೂ ಆದ ಅಂಶಗಳು ಅಲ್ಲಲ್ಲಿ ಸಿಕ್ಕಿಕೊಂಡಿರುತ್ತವೆ. ಕಲೆಗಾರ ಅವೆಲ್ಲವನ್ನೂ ತೊಡೆದುಹಾಕಿ ಪ್ರಕೃತಿಯಲ್ಲಿ ಪ್ರಕಟವಾಗದೇ ಇರುವ ಕಳಂಕರಹಿತವೂ ಶಾಶ್ವತವೂ ಸರ್ವಾಂಗಸಮ್ಮತವೂ ಆದ ದೈವಿಕ ಸೌಂದರ್ಯವನ್ನು ಕಲ್ಪಿಸುತ್ತಾನೆ. ಟರ್ನರ್ ಎಂಬಾತ ರವಿ ಮುಳುಗುವ ಸಮಯದ ಚಿತ್ರಗಳನ್ನು ರಚಿಸುವುದರಲ್ಲಿ ಬಹು ನಿಪುಣ. ಅವನ್ನು ಕುರಿತು ಒಬ್ಬಾಕೆ ಆಕ್ಷೇಪಿಸಿದಳಂತೆ : "ಸೂರ್ಯ ಮುಳುಗುವ ಇಂಥಾ ಬಗೆಯನ್ನು ಲೋಕದಮೇಲೆ ನಾನೆಂದೂ ನೋಡಿಲ್ಲ!" ಅದಕ್ಕೆ ಅವನು ಉತ್ತರವಿತ್ತನಂತೆ : " ಅಮ್ಮ, ಆ ಬಗೆಯನ್ನು ನೋಡಬೇಕೆಂಬ ಹೆಬ್ಬಯಕೆ ನಿನಗೆ ಇಲ್ಲವೆ? " ಪ್ರಕೃತಿಗೇ ಗೊತ್ತಿಲ್ಲವಂತೆ ಪ್ರಕೃತಿಯ ಗರ್ಭದಲ್ಲಿರುವ ಘನವಾದ ಅರ್ಥವನ್ನು ವ್ಯಕ್ತಪಡಿಸುವುದು ಕಲೆಯ ಜವಾಬ್ದಾರಿ. ಒಟ್ಟಿನಲ್ಲಿ ಕಲೆ ಅತಿ ಮೋಹಕವಾದ ವಸ್ತುವಿಶೇಷ. ಹಾಗೆಂದಮೇಲೆ ಕಲೆಯ ಕಡೆಗೆ ಒಲಿಯುವುದು ಮನುಷ್ಯನಿಗೆ ಅನಿವಾರ್ಯ. ಆದ್ದರಿಂದ ಕಲಾಭಿರುಚಿ ಎಲ್ಲರಿಗೂ ಅತ್ಯಗತ್ಯ.

೩ ರುಚಿಯ ನಿಷ್ಕರ್ಷೆ

ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ—ಈ ಐದು ಜ್ಞಾನೇಂದ್ರಿಯಗಳನ್ನು ಎಲ್ಲರೂ ಬಲ್ಲರು. ಯಾವುದಾದರೂ ದೃಶ್ಯ, ಶ್ರವಣ, ವಾಸನೆ, ಗ್ರಾಸ, ಸ್ಪರ್ಶ ತಮಗೆ ಉಂಟಾದ ಒಡನೆಯೇ ಅದನ್ನು ಸ್ವೀಕರಿಸಿ ಜ್ಞಾನವಾಹಿ ನರಗಳ ಮೂಲಕ ತಕ್ಷಣ ಮೆದುಳಿಗೆ ಸುದ್ದಿಯನ್ನು ಸಲ್ಲಿಸುವುದು ಈ ಇಂದ್ರಿಯ ಗಳ ಎಚ್ಚರಿಕೆ. ಮೆದುಳು ಆ ಸಂಭವವನ್ನು ವಿಚಾರಿಸಿ ಆಗಬೇಕಾದುದನ್ನು ಇತ್ಯರ್ಥಪಡಿಸಿ ವಿಳಂಬವಿಲ್ಲದೆ ತಕ್ಕ ಕಾರ್ಯವನ್ನು ನಡಸುವಂತೆ ಅಂಗಾಂಗಗಳಿಗೆ ಕ್ರಿಯಾವಾಹಿ ನರಗಳ ಮೂಲಕ ತನ್ನ ಅಪ್ಪಣೆಯನ್ನು ಕಳಿಸುತ್ತದೆ. ಅದರಂತೆ ಆಗಿ ಹೋಗುವುವು ನಮ್ಮ ಎಲ್ಲ ಚೇತನ ವ್ಯಾಪಾರ. ಈ ಐದೇ ಅಲ್ಲದೆ ಇನ್ನೂ ಮೂರು ಜ್ಞಾನೇಂದ್ರಿಯಗಳನ್ನು ನಾವು ಪಡೆ ದಿದ್ದೇವೆ: ಮಾಂಸಖಂಡಗಳ ಚಲನವಲನಕ್ಕೆ ಸಂಬಂಧಪಟ್ಟು ದೊಂದು; ನಾವು ಜೋಲಿತಪ್ಪಿ ಬೀಳದೆ ಸಮಭಾರದಲ್ಲಿ ನಿಂತಿ ರುವುದನ್ನು ಬೋಧಿಸುವುದೊಂದು; ಹಸಿವು ನೀರಡಿಕೆ ಹೊಟ್ಟೆ ನೋವು ಓಕರಿಕೆ ಮೊದಲಾದುವನ್ನು ಸೂಚಿಸುತ್ತ ಒಳ ಅಂಗ ಗಳಿಗೆ ಸೇರಿಕೊಂಡಿರುವುದೊಂದು. ಆ ವಿಷಯ ಒತ್ತಟ್ಟಿಗಿರಲಿ.

ಜ್ಞಾನೇಂದ್ರಿಯಗಳು ತಮ್ಮ ತಮ್ಮ ಅಲುಗಾಟವನ್ನು ನಿಶ್ಚಿಂತೆಯಿಂದ ತ್ವರೆಯಲ್ಲಿ ಕೈಕೊಳ್ಳುವುದು ಸ್ವಭಾವಸಿದ್ಧ. ಅತಿ ಚುರುಕಾದ ರಶ್ಮಿ ಕಣ್ಣಿನ ಮೇಲೆ ಬಿದ್ದಲ್ಲಿ, ಮಲ್ಲಿಗೆಯ ಸುಗಂಧ ನಾಸಿಕವನ್ನು ಸಮೀಪಿಸಿದಲ್ಲಿ, ಭಯಂಕರ ಗಲಭೆ ಕಿವಿಯನ್ನು ಹಠಾತ್ತು ಬಡಿದಲ್ಲಿ, ಅಂಗಾಲಿಗೆ ಒಂದು ಮುಳ್ಳು ಚುಚ್ಚಿದಲ್ಲಿ, ಪೊಂಗಲಿನ ತುತ್ತು ಬಾಯೊಳಗೆ ಉರುಳಿದಲ್ಲಿ,

ಆಯಾ ಕರಣವೂ ನರಗಳೂ ಮಿದುಳೂ ಕೂಡಲೇ ಕದಲಾಡು ವುದರಿಂದ ಸುಖವೋ ದುಃಖವೋ ನಮ್ಮ ಚಿತ್ತದಲ್ಲಿ ಬೇಗ ಉಲ್ಬಣವಾಗುತ್ತದೆ. ಆದ್ದರಿಂದ ಪ್ರತಿಯೊಂದು ಜ್ಞಾನೇಂದ್ರಿಯಕ್ಕೂ ತನ್ನನ್ನು ಮುಟ್ಟುವ ಉದ್ದೀಪಕ ಘಟನೆಗಳಲ್ಲಿ ಹಿತಾ ಹಿತವನ್ನು ತಾನಾಗಿ ವಿವೇಚಿಸುವ ರುಚಿ ಬೆಳೆದು ಬಂದಿದೆ. ಅದು ಸ್ವತಂತ್ರವಾಗಿ ವರ್ತಿಸಬಹುದು. ಇಷ್ಟವಾದ್ದನ್ನು ತಿನ್ನು ವುದನ್ನೂ ಅನಿಷ್ಟವಾದ್ದನ್ನು ತಿರಸ್ಕರಿಸುವುದನ್ನೂ ಒಳ್ಳೆಯ ದಕ್ಕೆ ಮೂಗು ಅರಳಿಸುವುದನ್ನೂ ಕೆಟ್ಟುದಕ್ಕೆ ಮೂಗು ಮುಚ್ಚುವುದನ್ನೂ ಕೋಮಲತೆಯನ್ನು ತಾಕುವುದನ್ನೂ ಕರ್ಕಶತೆಯನ್ನು ನೂಕುವುದನ್ನೂ ಯಾರಿಗೆ ಯಾರೂ ಹೇಳಿಕೊಡ ಬೇಕಾದುದಿಲ್ಲ. ಕಾಡುಮನುಷ್ಯ ಜೀವನ್ಮುಕ್ತರಿಬ್ಬರನ್ನು ಬಿಟ್ಟರೆ ಉಳಿದ ಎಲ್ಲ ಸ್ತ್ರೀ ಪುರುಷರಲ್ಲಿಯೂ ಸಾಮಾನ್ಯವಾಗಿ ಈ ರುಚಿಗಳ ಚಟುವಟಿಕೆ ಸಮರ್ಪಕ. ಇನ್ನೊಂದು ಮಾತು. ಸಾಧಾರಣವಾಗಿ ಯಾವೊಂದು ಜ್ಞಾನೇಂದ್ರಿಯವೂ ಒಂಟಿ ಯಾಗಿ ಪ್ರವೃತ್ತಿಗೈವುದು ದುರ್ಲಭ. ಶ್ಯಾವಿಗೆ ಪಾಯಸವನ್ನು ಕುಡಿಯುವಾಗ ಅದರ ವರ್ಣ, ಅದರ ಕಂಪು, ಅದರ ಸುಖೋಷ್ಣತೆ, ಅದರ ಪಾಯಸತ್ವ—ಎಲ್ಲವೂ ಸಮಂಜಸವಾಗಿ ಕೂಡಿ ಕೊಂಡು ನೆಮ್ಮದಿಯನ್ನು ಈಯುವುದಿಲ್ಲವೆ? ಆ ಸಂದರ್ಭ ದಲ್ಲಿ ನಾಲಗೆಯ ರುಚಿ ಮುಖ್ಯವಾದರೂ ನೇತ್ರ, ನಾಸಿಕ ತ್ವಗಿಂದ್ರಿಯಗಳ ರುಚಿಗಳ ಸಹಕಾರ ಉಪಷ್ಟಂಭಕ, ಅಗತ್ಯ. ಮೃದುವಾದ ಮೈ, ಕರ್ಣರಸಾಯನವಾದ ತೊದಲು ಮಾತು, ಶೈಶವದ ಸ್ವಂತ ಒಲಪು ಒಯ್ಯಾರ, ಎಲ್ಲವೂ ಸಮನ್ವಯವಾಗಿ ಸೇರಿದರೆ ತಾನೆ ಮಗುವಿನ ಮುದ್ದುತನದ ಉದ್ಭವ? ಆದ್ದರಿಂದ ಜ್ಞಾನೇಂದ್ರಿಯದ ರುಚಿ ಕೊಂಚಮಟ್ಟಿಗೆ ಮಿಶ್ರರುಚಿ.

ಇನ್ನು ಕಲಾಭಿರುಚಿಯನ್ನು ಹಿಕ್ಕಿ ನೋಡೋಣ. ಮಹಾ ಕಾವ್ಯವೊಂದನ್ನು ನಮ್ಮ ಕಣ್ಣೆದುರು ಇಟ್ಟುಕೊಂಡರೆ, ಪ್ರಸಿದ್ಧ ಪ್ರಾಚೀನ ದೇವಾಲಯದ ಹತ್ತಿರ ಹೋಗಿನಿಂತರೆ, ಸಂಗೀತ ಸಾರ್ವಭೌಮನ ಗಾಯನವನ್ನು ಕೇಳುತ್ತ ಕುಳಿತಿರೆ, ನಾವು ಮಾಡಬೇಕಾದ್ದೆಲ್ಲವನ್ನೂ ಯಾವೊಂದು ಯತ್ನವೂ ಇಲ್ಲದೆ ಪ್ರಕೃತಿಪೂರ್ವಕವಾಗಿ ಮಾಡಿ, ಆಡಬೇಕಾದ್ದೆಲ್ಲವನ್ನೂ ಬುದ್ಧಿಗೆ ತ್ರಾಸಕೊಡದೆ ಅನಾಯಾಸವಾಗಿ ಆಡಿಬಿಡಲು ಆಗುತ್ತದೆಯೇ? ತಲೆ ಕೊಡವಿ, ಭಲೇ ಅಬ್ಬಬ್ಬ ಎಂದು ಕೂಗಿ, ಚಪ್ಪಾಳೆತಟ್ಟಿ, ಬಹಳ ಚೆನ್ನಾಗಿದೆ ಎಂಬೊಂದು ಆಶ್ಚರ್ಯ ವಾಚಕವನ್ನು ಉಚ್ಚರಿಸುವುದು ಅಷ್ಟೇನೂ ಕಷ್ಟವಿಲ್ಲದ ನಡೆವಳಿಕೆ. ಆದರೆ ಅದು ಕಲಾನುಭವದ ಮೊದಲನೆಯ ಮಜಲು; ಇನ್ನೂ ಹತ್ತಾರು ಮಜಲುಗಳನ್ನು ಪ್ರಯಾಸಪಟ್ಟು ದಾಟಿದರೆ ಆಗ ಆ ಯಾತ್ರೆ ಕೈಗೂಡಿದಂತೆ. ಏತಕ್ಕೆಂದರೆ ಕಲಾಭಿರುಚಿ ವಿಲಕ್ಷಣವಾದ ಬಹುಮಿಶ್ರರುಚಿ; ಅಷ್ಟೇಕೆ, ಅದೊಂದು ರುಚಿ ಗೋಷ್ಠಿ. ಅದು ಇಂದ್ರಿಯ, ಮೆದುಳು, ಚಿತ್ತ, ಹೃದಯ, ಆತ್ಮ ಯಾವುದನ್ನೂ ಬಿಡದೆ ಇಡೀ ಮಾನವ ಪ್ರಕೃತಿಗೆ ಅನುರೂಪವಾಗಿ ಅನ್ವಯಿಸುವ ಒಂದು ಕೌಶಲಸಮೂಹ, ಗುಣಸಮೃದ್ಧಿ. ಅದೊಂದು ಪ್ರತ್ಯೇಕ ಸಂಸ್ಕಾರ. ಆದ್ದರಿಂದ ಅದು ಪ್ರಕೃತಿ ಸಾಧ್ಯವಲ್ಲ, ಪ್ರಯತ್ನಸಾಧ್ಯ. ಗಣಿತಶಾಸ್ತ್ರದ ಅಧ್ಯಾಪಕನಾದ ಒಬ್ಬ ಯುವಕ ಒಬ್ಬ ಸಾಹಿತಿಯೊಡನೆ ಎಂದನಂತೆ: "ಆಟಗಳನ್ನು ಅರಿತಾಯ್ತು; ಚದುರಂಗವನ್ನು ಚೆನ್ನಾಗಿ ಬಲ್ಲೆ; ಸಂಗೀತವನ್ನು ಕಲಿತು ಮುಗಿಸಿದೆ; ಸಾಹಿತ್ಯವೊಂದು ಬಾಕಿ: ಇನ್ನು ಅದಕ್ಕೆ ಕೈಹಾಕುವೆ." ಈ ಪ್ರಸಂಗ "ಜಾಮೂನು ಮೆದ್ದೆ; ಕೇಸರಿಭಾತು ಉಂಡೆ; ಚಿರೋಟಿ ಚಪ್ಪರಿಸಿದೆ;

ಮುಂಡಿಗೆಯೊಂದು ಬಾಕಿ: ಅದರ ರುಚಿಯನ್ನು ಈಗ ನೋಡುವೆ!" ಎಂದಹಾಗಾಯ್ತು. ಕಲೆಯ ಮೋಡಿಯೇ ಬೇರೆ; ಅಷ್ಟು ಸುಲಭವಾಗಿ ಅದು ದಕ್ಕುವುದಿಲ್ಲ. ಬರಿಯ ಮಂತ್ರಕ್ಕೆ ಉದುರದ ಮಾವಿನಕಾಯಿ; ಗೂಳಿಯ ಕೊಂಬಿಗೆ ಕಟ್ಟಿರುವ ಜರತಾರಿ ಶಲ್ಯ; ಎಣ್ಣೆಸವರಿದ ದೊಡ್ಡ ಕಂಭದ ಮೇಲಿಟ್ಟಿರುವ ಹಣದ ಗಂಟು. ತಿರುತಿರುಗಿ ಸೋಲಾದರೂ ಕುಗ್ಗದೆ, ಮೈ ಕೈ ಅವಮಾನವಾವುದನ್ನೂ ಲೆಕ್ಕಿಸದೆ, ಹಗಲು ಇರುಳು ದುಡಿದು, ಉಚಿತವಾದ ಅಭಿರುಚಿಯನ್ನು ಬೆಳೆಸಿ ಕೊಂಡು, ಕಲೆಯ ಒಳಗುಟ್ಟನ್ನು ಕೈವಶಮಾಡಿಕೊಳ್ಳಬೇಕು, ನಮ್ಮ ಜೀವನದ ಸಂಪೂರ್ಣತೆಗಾಗಿ, ಸಾಫಲ್ಯಕ್ಕಾಗಿ.

---

೪ "ಲೋಕೋ ಭಿನ್ನರುಚಿಃ"

ಶ್ರಮವಹಿಸಿ ಕಲಾಭಿರುಚಿಯನ್ನು ಸ್ವಾಧೀನಪಡಿಸಿಕೊಳ್ಳ ಬೇಕು ಎಂದೆವು. ಆದರೆ ಅದು ಒಂದೇ ಹಲವೇ? ಸರ್ವ ಸಾಮಾನ್ಯವಾದ ಒಂದು ರುಚಿಯುಂಟೇ, ಅಥವಾ ಒಬ್ಬೊಬ್ಬ ರಿಗೆ ಒಂದೊಂದು ರುಚಿಯೇ? ತಿಂಡಿ ತೀರ್ಥ ಶಬ್ದ ಸುವಾ ಸನೆ ಒಡವೆ ಉಡುಪುಗಳ ವಿಷಯದಲ್ಲಿ ಜನಪದ ಅಂಗೀಕರಿ ಸಿರುವ ಒಂದೆರಡು ಸಾಮತಿಗಳಿವೆ: "ಒಬ್ಬನ ಗಂಜಿ ಇನ್ನೊ ಬ್ಬನಿಗೆ ನಂಜು"; "ಹೆಣ್ಣಿಗೆ ಆಗುವ ಒಗ್ಗರಣೆ ಗಂಡಿಗೆ

ಆಗದು"; "ಅವನವನ ರುಚಿ ಅವನವನಿಗೆ; ಇದು ಒಪ್ಪು ಅದು ತಪ್ಪು ಎನ್ನುವ ವಾದವೇಕೆ?" ಕೆಲವರಿಗೆ ಕಾಫಿ, ಕೆಲವರಿಗೆ ಟೀ ಸೇರದು. ಕರಿಯ ಗೂಡಂಚಿನ ಸೀರೆ ಅತ್ತೆಗೆ ಇಷ್ಟವಾದರೆ ಹಸುರು ಮಹೇಶ್ವರೀ ಅಂಚಿನ ಸೀರೆ ಸೊಸೆಗೆ ಪ್ರೀತಿ. ಅಂಗಿಗೆ ಮೂರು ಗುಂಡಿ ಇರಬೇಕೆಂಬುದು ಅಪ್ಪನ ಆಜ್ಞೆ; ಒಂದೇ ಗುಂಡಿ ಸಾಕೆಂಬುದು ಮಗನ ನಿರ್ಧಾರ. ಕೆಂಡಸಂಪಿಗೆಯ ಕಂಪನ್ನಾದರೂ ಸಹಿಸಬಲ್ಲರು ಕೆಲವರು; ಗುಲಾಬಿಯ ಗಂಧವೇ ಹೆಚ್ಚು ಮತ್ತೆ ಕೆಲವರಿಗೆ. ಪ್ರಾಣಿ ಸ್ವಭಾವವನ್ನು ಪರಿಕಿಸೋಣ. ಇತರ ಯಾವ ಹಕ್ಕಿಯೂ ಮುಟ್ಟುವುದಕ್ಕೆ ಕೂಡ ಒಪ್ಪದ ಕಂಬಳಿಹುಳುವೆಂದರೆ ಬುಲ್ ಬುಲ್ ಪಕ್ಷಿಗೆ ಪ್ರಾಣ. ಸ್ಕುಅ, ಫ್ರೀಗೇಟ್-ಬರ್ಡ್ ಎಂಬ ದೊಡ್ಡ ಹಕ್ಕಿಗಳು ಆಹಾರವನ್ನು ಆರ್ಜಿಸುವ ವಿಧಾನ ವಿಚಿತ್ರ. ಪುಟ್ಟ ಪುಟ್ಟ ಹಕ್ಕಿಗಳು ಮೀನುಗಳನ್ನು ಹಿಡಿದು ನುಂಗಿ ನೀರಿನಿಂದ ಹಿಂತಿರುಗುತ್ತವೆ; ಹಾದಿಯಲ್ಲಿ ಹೊಂಚುಕಾಯುತ್ತಿರುವ ಸ್ಕುಅ ಫ್ರಿಗೇಟ್-ಬರ್ಡ್ ಅವನ್ನು ಆಕ್ರಮಿಸಿ, ಅವುಗಳ ಬೆನ್ನಿನ ಮೇಲೆ ತಮ್ಮ ರೆಕ್ಕೆಯಿಂದ ಬಲವಾಗಿ ಬಡಿದು, ನುಂಗಿದ ಮೀನುಗಳನ್ನು ಅವು ವಾಂತಿಮಾಡುವಂತೆ ಎಸಗುತ್ತವೆ. ಆ ಮೀನುಗಳನ್ನು ತಾವು ವಿಲಾಸದಿಂದ ಭಕ್ಷಿಸುತ್ತವೆ! ಹೆಣ್ಣು ಚೇಳು ಆಗಾಗ ಗಂಡು ಚೇಳನ್ನೇ ಸಮಾಧಾನದಿಂದ ಕಬಳಿಸಿಬಿಡುತ್ತದೆ. ಎರೆಹುಳುವಿಗೆ ನೀರುಳ್ಳಿಯ ಮೇಲೆ ವಿಪರೀತ ಆಸೆ. ಮನುಷ್ಯ ವರ್ಗದಲ್ಲಿಯೂ ಈ ಬಗೆಯ ವಿಕಾರ ವ್ಯತ್ಯಾಸಗಳು ಹೇರಳ. ಮಳೆಹುಳುಗಳನ್ನೂ, ಕಪ್ಪೆಗಳನ್ನೂ, ಹೆಗ್ಗಣಗಳನ್ನೂ ಕೊಂಕಿಲ್ಲದೆ ತಿನ್ನುವವರನ್ನು ಬಲ್ಲೆವು. ಹಾವು, ಹಲ್ಲಿ, ಗಾಜು, ಕಬ್ಬಿಣ, ಕಸ, ವಿಷವೆಲ್ಲವನ್ನೂ ಉಲ್ಲಾಸದಿಂದ

ಮೆಲ್ಲುವ ಸರ್ವಭಕ್ಷಕರೂ ಆಗಾಗ ಅವತರಿಸುವುದಿಲ್ಲವೆ? ಅಂದ ಮೇಲೆ ಲೋಕದ ರುಚಿ ವಿಭಿನ್ನತೆಗೆ ಹದ್ದುಂಟೆ, ಮುದ್ದುಂಟೆ?

ಕಲೆಯ ವಿಚಾರದಲ್ಲಿಯೂ ಹೀಗೇಕಿರಬಾರದು? ಮೊದಲನೆಯವನಿಗೆ ಕಲ್ಯಾಣಿಯೇ ರಾಜರಾಗ, ಎರಡನೆಯವನಿಗೆ ಕಾನಡಕ್ಕಿಂತ ಹೆಚ್ಚಿನ ರಾಗವಿಲ್ಲ; ಮೂರನೆಯವನಿಗೆ ಹಂಸಧ್ವನಿ ಬಹು ಮಂಜುಳ; ನಾಲ್ಕನೆಯವನಿಗೆ ಹಿಂದೂಸ್ಥಾನಿಯ ಮೇಲೆ ಹುಚ್ಚು ವ್ಯಾಮೋಹ. ಇರಲಿ; ಕೊಳ್ಳೆಹೋದುದೇನು? ಕಲಾಪ್ರಪಂಚ ಬಹಳ ವಿಸ್ತಾರವಾದುದು. ಯಾರಿಗೆ ಯಾವುದು ಸಮರ್ಪಕವೋ ಸಹ್ಯವೋ ಅವನ್ನು ತೆಗೆದುಕೊಳ್ಳಲಿ; ಮಿಕ್ಕವನ್ನು ಬಿಟ್ಟುಬಿಡಲಿ; ವ್ಯಾಜ್ಯವೇತಕ್ಕೆ? ವೈಮನಸ್ಯಕ್ಕೆ ಕಾರಣವೆಲ್ಲಿದೆ? ಕನ್ನಡದ ಷಡಕ್ಷರಿ ಹೇಳಿಲ್ಲವೆ:

> ಅಳಿಯುಲರಂ ಗಿಳಿ ಪಣ್ಣಂ ।
> ತಳಿರಂ ಪಿಕನೊಲ್ವ ತೆರದೆ ಕುಜದೊಳ್ ಕೃತಿಯೊಳ್ ॥
> ವಿಳಸಿತ ಪದಮುಮನರ್ಥಮುಂ ।
> ಅಳಂಕೃತಿಪ್ರಹಿತಭಾವಮುಂ ಕೆಲ ಕೆಲರೊಲ್ವರ್ ॥

ಇ. ಇ. ಕೆಲೆಟ್ ಎಂಬೊಬ್ಬ ಲೇಖಕ “ರಂಕಲ್‌ರಾಟೆಯಂತೆ ಸುತ್ತುವ ರುಚಿ” ಎಂಬ ತನ್ನ ಪುಸ್ತಕದಲ್ಲಿ, ಭಿನ್ನರುಚಿಯನ್ನು ಯಾರೂ ತಪ್ಪಿಸಲಾರರು ಎಂಬ ಸಿದ್ಧಾಂತವನ್ನು ವಿಜೃಂಭಣೆಯಿಂದ ಡಂಗುರ ಹೊಯ್ದಿದ್ದಾನೆ. ಅವನ ಅಭಿಮತದಂತೆ, ನಮಗೆ ಇದ್ದಕ್ಕಿದ್ದ ಹಾಗೆ ಚಳಿ ಪ್ರಾಪ್ತವಾದರೆ, ದಿನಪತ್ರಿಕೆಯ ಒಂದು ವಾಕ್ಯ ಜ್ಞಾಪಕಕ್ಕೆ ಬಂದರೆ, ಚೀಣಾದಲ್ಲಿ ಕ್ರಾಂತಿಯೆಂಬ ವರ್ತಮಾನ ಹರಡಿದರೆ, ರಸ್ತೆಯ ಆಚೆ ನಡೆಯುತ್ತಿರುವ ಕ್ರಿಕೆಟ್ ಆಟ ಹಠಾತ್ತ ಕಾಣಿಸಿದರೆ, ನಮ್ಮ ದೃಷ್ಟಿ

ಯೇ ಬದಲಾಯಿಸುತ್ತದೆ, ನಾವು ಓದುತ್ತಿರುವ ಗ್ರಂಥದ ಸ್ವರೂಪವೇ ಬೇರೆಯಾಗುತ್ತದೆ. ಅಷ್ಟೇ ಅಲ್ಲ; ಕೆಲೆಟ್ಟನ್ನು ನಂಬಿದರೆ ನಾವು ಓದುವ ಪುಸ್ತಕದ ಸ್ವಾರಸ್ಯ ಹಗಲಲ್ಲಿ ಒಂದು, ಇರುಳಲ್ಲಿ ಮತ್ತೊಂದು; ಈ ಹೊತ್ತು ಒಂದು, ನಾಳೆ ಬೇರೊಂದು! ಕಲಾಭಿರುಚಿ ಹೀಗೆ ಪಲ್ಲಟವಾಗುವ ಪಕ್ಷದಲ್ಲಿ ಅದಕ್ಕೆ ಒಂದು ಆಕೃತಿ, ಒಂದು ಆಚಾರ, ಒಂದು ಸಿಸ್ತು, ಒಂದು ಸ್ಥಿರತೆಯನ್ನು ಹೇಗೆ ವಿಧಿಸಲಾದೀತು? ಇದು ಕೆಲೆಟ್ ಗುಂಪಿನವರ ವಾದ.

ಕೆಲವು ವಿದ್ಯಮಾನಗಳನ್ನು ಸ್ಥೂಲವಾಗಿ ಗಮನಿಸಿದಲ್ಲಿ ಈ ವಾದ ಸರಿಯೋ ಏನೋ ಎಂದು ಚಿತ್ತಕ್ಕೆ ತೋರಬಹುದು. ಜನಪದದ ನಡತೆಯಲ್ಲಿ ಕಾಣುವ ಅವಿವೇಕವನ್ನು ನೋಡಿ. ಉತ್ತಮ ಸಾಹಿತ್ಯ ಸಂಗೀತ ಶಿಲ್ಪ ಚಿತ್ರಗಳನ್ನು ಅವರು ಯಾವಾಗ ಆಸಕ್ತಿಯಿಂದ ಮೆಚ್ಚಿದ್ದಾರೆ? ಇಂಗ್ಲೆಂಡಿನ ಮೇಲು ಮಟ್ಟದ ಕವಿಗಳಲ್ಲಿ ಒಬ್ಬನಾದ ವರ್ಡ್ಸ್‌ವರ್ತ್ ಜೀವಿಸಿದ್ದಾಗ ಅವನ ಕಾವ್ಯಗಳನ್ನು ಕೊಂಡು ಓದುವವರು ತೀರ ಕಡಮೆ; ಆದರೆ ಅವನ ಸಮಕಾಲೀನನಾದ ಟಪ್ಪರ್ ಎಂಬ ಕ್ಷುದ್ರ ಲೇಖಕನ ನೀತಿಪದ್ಯಗಳ ವ್ಯಾಪಾರದಿಂದ ಕವಿಗೆ ಹತ್ತುಸಾವಿರ ಪೌಂಡು, ಪುಸ್ತಕವ್ಯಾಪಾರಿಗೆ ಹತ್ತು ಸಾವಿರ ಪೌಂಡು ಲಾಭ ಬಂತು! ಬನ್‌ಯನ್ನನ ಉತ್ಕೃಷ್ಟ ಕಾದಂಬರಿಯು ನೆತ್ತಿಯ ಮೇಲೆ ತೊತ್ತುಗಳಿಗೆ ಯುಕ್ತವಾದ ಬರವಣಿಗೆಯೆಂಬ ಅಪಪ್ರಥೆ ಹಲವು ಕಾಲ ನಿಂತಿತ್ತು; ಅದರ ಹಿರಿಮೆಯನ್ನು ಅರಿಯಬೇಕಾದರೆ ಇಂಗ್ಲಿಷರಿಗೆ ನೂರೈವತ್ತು ವರ್ಷಗಳು ಬೇಕಾಯ್ತು. ಪೋರ್ಚುಗಲ್ ದೇಶದ ಕವಿಶಿರೋಮಣಿ ಕೆಮೋಯೆನ್ಸ್: ಅವನು ಬದುಕಿದ್ದಾಗ ಅವನ ಬಡತನ ವರ್ಣನಾತೀತ;

ಸೇವಕನೊಬ್ಬ ಭಿಕ್ಷೆ ಬೇಡಿ ಅವನನ್ನು ಕೆಲವುಕಾಲ ಕಾಪಾಡಿದ. ತಗಡಿನ ಮೇಲೆ ಚಿತ್ರ ಕೊರೆಯುವ ಕಲೆಯಲ್ಲಿ ನಿಷ್ಣಾತನಾದ ಚಾರ್ಲ್ಸ್ ಮೇರಿಯಾನ್ ರಿಕ್ತತೆಯಲ್ಲಿ ನರಳಿ ನರಳಿ, ಸಾಕಷ್ಟು ಆಹಾರವಿಲ್ಲದೆ ಸತ್ತ; ಒಂದು ಚಿತ್ರಕ್ಕೆ ಹತ್ತಾಣೆಯೆಂದರೂ ಅದನ್ನು ಕೊಳ್ಳುವವರೇ ಇರಲಿಲ್ಲ; ಈಗ ಒಂದೊಂದಕ್ಕೆ ಒಂದು ಸಾವಿರದ ಮುನ್ನೂರು ರೂಪಾಯಿ ಕೊಡಲು ರಸಿಕರು ಸಿದ್ಧ ರಾಗಿದ್ದಾರೆ! ಷೇಕ್ಸ್‌ಪಿಯರಿನ ಕೀರ್ತಿಗೆ ಒಂದೊಂದು ಅವಧಿ ಯಲ್ಲಿ ಒಂದೊಂದು ಬಗೆಯ ಬಣ್ಣ: ತನ್ನ ಕಾಲದಲ್ಲಿ ಒಳ್ಳೆಯ ನಾಟಕಗಳ ಕರ್ತೃ ಎಂದು ಅವನು ಸನ್ಮಾನಿತನಾಗಿದ್ದ; ಆಮೇಲೆ ಅವನೊಬ್ಬ ಮೇಧಾವಿಯಾದರೂ ನಯವನ್ನರಿಯ ದವನೆಂಬ ಮಿಶ್ರಮರ್ಯಾದೆ ಅವನಿಗೆ ದೊರಕಿತು; ಅನಂತರ ದೋಷರಹಿತವಾದ ಅಮಾನುಷ ಕವಿತೆಯನ್ನು ರಚಿಸಿದವ, ನಿಜವಾಗಿ ದೇವಾಂಶಪುರುಷ, ಎಂಬ ಅಧಿಕಪ್ರಶಂಸೆಯನ್ನು ಅವನ ಮೇಲೆ ಹೇರಿದರು; ಈಚೆಗೆ ಅವನೊಬ್ಬ ಕವಿಶ್ರೇಷ್ಠ ನಾದರೂ ಮನುಷ್ಯಮಾತ್ರನೇ ಅಹುದು ಎಂಬ ಅಭಿಪ್ರಾಯ ಬೇರೂರುತ್ತಿದೆ. ನಮ್ಮಲ್ಲಿ ಮೂಢನಂಬಿಕೆ ಇಲ್ಲವೆ: ಬೆರಳು ಮಡಿಸಿ ಹೇಳಿಕೊಳ್ಳಬಹುದಾದ ಕವಿಯೆಂದರೆ ಕಾಳಿದಾಸ; ಅವನಿಗೆ ಎರಡನೆಯವನು ಒಬ್ಬನೂ ಇಲ್ಲದಿರುವುದರಿಂದ ಎರ ಡನೇ ಬೆರಳಿಗೆ 'ಅನಾಮಿಕ' ವೆಂಬ ನಾಮ ಅನ್ವರ್ಥವಾಯ್ತು! ಭರತಖಂಡದ ಹತ್ತಾರು ಕವಿಪುಂಗವರಿಗೆ ಎಂಥಾ ಅನ್ಯಾಯ!

ಜನಸಾಮಾನ್ಯರ ರೀತಿ ಇಂತಾಯ್ತು, ಹೋಗಲಿ; ಕಲೆ ಗಾರರಾದರೂ ತಮ್ಮ ರುಚಿಯಲ್ಲಿ ಶುಚಿಯಾದ ವಿತರಣೆಯನ್ನು ತೋರಿಸಿದ್ದಾರೆಯೆ? ಅಯ್ಯೊ, ಅವರಲ್ಲಿಯೂ ವೈಪರೀತ್ಯಗಳು ಅನೇಕ. ದೊಡ್ಡ ಸಾಹಿತಿಯಾದ ವಾಲ್ಟೇರ್ ಮಹಾಕವಿ

ಷೇಕ್ಸ್‌ಪಿಯರನ್ನು "ಅಲ್ಲೊಂದು ಇಲ್ಲೊಂದು ಮುತ್ತು ಸಿಕ್ಕುವ ಕಸದ ತಿಪ್ಪೆ!" ಎಂದು ಹೀಯಾಳಿಸಿದ. ಕಾರ್ಲೈಲನ ದೃಷ್ಟಿಯಲ್ಲಿ "ನ್ಯೂಮನ್ನನ ಮೆದುಳು ಸಾಧಾರಣ ಗಾತ್ರದ ಮೊಲದ ಮೆದುಳು!" ಸರ್ವ್ಯಾಂಟೇಸ್ ಅತ್ಯುತ್ತಮ ಕಾದಂಬರಿಕಾರ; ಆಶ್ರಯ ಪಡೆಯಲೋಸುಗ ತನ್ನ ಉದ್ಗ್ರಂಥದ ಕೈಬರೆಹವನ್ನು ಲೋಪ್‌ಡವೇಗ ಎಂಬ ಶ್ರೀಮಂತಕವಿಯ ಮುಂದಿಟ್ಟ; ಡವೇಗ ಅದನ್ನು ನೋಡಿ, ಅದರಲ್ಲಿ ಏನೂ ಗುಣವಿಲ್ಲವಾದ್ದರಿಂದ ಗ್ರಂಥಕರ್ತನಿಗೆ ಯಾವ ಸಹಾಯವನ್ನು ನೀಡಲೂ ತನಗೆ ಅವಕಾಶವಿಲ್ಲವೆಂದು ಹೇಳಿ, ಅದನ್ನು ಹಿಂದಕ್ಕೆ ಕಳಿಸಿದ. ರೂಬಿಲಾಕ್ ಎಂಬ ಆಧುನಿಕ ಶಿಲ್ಪಿ ರೋಮ್ ನಗರಕ್ಕೆ ಹೋದಾಗ, ಅಲ್ಲಿದ್ದ ಪುರಾತನಯುಗದ ಗ್ರೀಕ್‌ರೋಮನರು ಕೊರೆದ ವಿಗ್ರಹಗಳನ್ನು ಕಂಡು, ಗಟ್ಟಿಯಾಗಿ ನಕ್ಕುಬಿಟ್ಟನಂತೆ! ವೆಲಾಸ್ಕೆ ಎಂಬ ಚಿತ್ರಕಾರನಿಗೆ ಪ್ರಸಿದ್ಧ ಚಿತ್ರಕಾರನಾದ ರಾಫೇಲನ ಕೃತಿ ಸಪ್ಪೆಯೆನಿಸಿತು. ಸೆಜಾನ್ ಎಂಬ ಇನ್ನೊಬ್ಬ ಗೌಗಿನ್ ಎಂಬುವನನ್ನು ಕುರಿತು ನುಡಿದ: "ಪ್ರಾಮಾಣಿಕವಾಗಿ ಹೇಳುತ್ತೇನೆ, ಗೌಗಿನನಿಗೆ ಬುದ್ಧಿ ನೆಟ್ಟಗಿಲ್ಲ." ಯೂರೋಪಿನ ನರ್ತಕಿಯರಲ್ಲಿ ಪ್ಯಾವ್ಲೊವ ಅತ್ಯಂತ ನಿಪುಣೆ; ಆದರೂ ಕಲಾವಿದನಾದ ಸರ್ಜ್ ಡೈಗಲಫ್ ಅವಳನ್ನು ಉದಾಸೀನಗೈದು, ಸಾಮಾನ್ಯ ನರ್ತಕಿಯಾದ ಐಡ ರೂಬಿನ್‌ಸ್ಟೈನಳಿಗೆ ತಡೆಯಿಲ್ಲದ ಗೌರವವನ್ನು ಅರ್ಪಿಸಿದ. ವಿಸ್ಲರ್ ಉತ್ಕೃಷ್ಟ ಚಿತ್ರಗಾರ; ಇತರ ಕಲೆಗಾರರು ಅವನಿಗೆ ಕೊಟ್ಟ ತೊಂದರೆ ಅಷ್ಟಿಷ್ಟಲ್ಲ. ಬ್ರಿಟಿಷ್ ಕಲೆಗಾರರ ಸಂಘಕ್ಕೆ ಕೆಲವುಕಾಲ ಅವನು ಅಧ್ಯಕ್ಷನಾಗಿದ್ದ; ಸದಸ್ಯರು ಹೂಡಿದ ಕಿರುಕುಳವನ್ನು ಸಹಿಸಲಾರದೆ ಅವನು ರಾಜಿನಾಮೆ

ಕೊಡಬೇಕಾಯ್ತು. " ನಡದದ್ದೇನು ? " ಎಂದು ಯಾರೋ ಕೇಳಲು, ವಿಸ್ಲರ್ ಆಪಹಾಸ್ಯಗೈದ : " ಸಂಗತಿ ಬಹಳ ಸರಳ; ಕಲೆಗಾರರು ಹೊರಕ್ಕೆ ಬಂದರು, ಬ್ರಿಟಿಷರು ಒಳಗೆ ಇದ್ದಾರೆ." ಮಧುರಕವಿ ಯಾವ ಶಂಕೆಯೂ ಇಲ್ಲದೆ " ನೇಮಿಜನ್ನಮರಿ ರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ " ಎಂದು ಟಿಪ್ಪಣಿ ಬರೆದಿಲ್ಲವೆ? ಈ ವಿಧದ ಭ್ರಾಂತಿವಿಲಾಸ, ಮಾತ್ಸರ್ಯೋಪಾಖ್ಯಾನಗಳನ್ನು ನೂರಾರು ಹೇಳಬಹುದು.

ಪರ್ಯಾಲೋಚನೆ ಮಾಡಿದಲ್ಲಿ, ಈ ನಿದರ್ಶನವಾವುದರಿಂದಲೂ ಕಲಾಭಿರುಚಿ ತಾತ್ಕಾಲಿಕವೂ ಅನಿಶ್ಚಿತವೂ ನಂಬಲು ಅನರ್ಹವೂ ಆದ ಚಂಚಲ ಚಿತ್ತವೃತ್ತಿಯೆಂದು ಪ್ರಮಾಣವಾಗುವುದಿಲ್ಲ. ಏತಕ್ಕೆಂದರೆ ಒಂದು ಕಡೆ ಜನತೆಗೆ ವಿದ್ಯಾಭ್ಯಾಸ ಸಾಲದು ; ಇನ್ನೊಂದು ಕಡೆ ಹೀಗೆ ಮನಸ್ಸಿಗೆ ಬಂದ ತೀರ್ಪುಗಳನ್ನು ತಡೆಬಡೆಯಿಲ್ಲದೆ ತುಟಿಯಿಂದ ಹೊರಕ್ಕೆ ತಳ್ಳಿದವರಾರೂ ರುಚಿಯನ್ನು ಉದ್ದೇಶಪಟ್ಟು ದೀರ್ಘವ್ಯಾಸಂಗದಿಂದ ಅಭಿವೃದ್ಧಿಪಡಿಸಿಕೊಂಡ ರಸಜ್ಞರಲ್ಲ. ಕವಿ ಕವಿಯನ್ನೂ, ಶಿಲ್ಪಿ ಶಿಲ್ಪಿಯನ್ನೂ, ಸಂಗೀತಗಾರ ಸಂಗೀತಗಾರನನ್ನೂ ಹಳಿಯುವುದು, ಚಿಪ್ಪಿಗ ಚಿಪ್ಪಿಗನನ್ನೂ, ಅಕ್ಕಸಾಲೆ ಅಕ್ಕಸಾಲೆಯನ್ನೂ ಹಳಿಯುವಂತೆ ಸಹಜ ; ಅದು ಸ್ವಜಾತಿ ವೈರ ಅಷ್ಟೆ. ಹೂವಿನ ಸಾರವನ್ನ ಹೀರುವುದು ಮತ್ತೊಂದು ಹೂವಲ್ಲ; ಹೂವಿನಿಂದ ಹೂವಿಗೆ ಹಾರಾಡುವ ದುಂಬಿ. ಗಂಭೀರ ವಿಮರ್ಶಕರು, " ಕಾವ್ಯಾರವಿಂದ ಮಕರಂದ ಮಧುವ್ರತಾನಾಂ " ಎನಿಸಿಕೊಂಡವರು, ಹಾಗೆ ಯದ್ವಾತದ್ವಾ ಹರಟೆರುವುದು ಅತಿ ವಿರಳ. ರುಚಿಯ ಸ್ಥಿರತೆ ಸಾರ್ಥಕತೆ ಸರ್ವಸಾಮಾನ್ಯತೆಗಳಿಗೆ ಅವರು ಗಣ್ಯಮಾದರಿ. ಅಲ್ಲದೆ ದಿನ ಕಳೆದಹಾಗೆಲ್ಲ ಎಲ್ಲವೂ

ನೇರ್ಪಡುತ್ತ ಹೋಗುವುದು ಸತ್ಯ. ಹಿಂದೂಮತ ಹೇಳುವಂತೆ ಧರ್ಮದೇವತೆಯಲ್ಲವೇ ಕಾಲಪುರುಷ? ನ್ಯಾಯಪ್ರತಿಷ್ಠಾಪನೆಗೆ ಶಪಥತೊಟ್ಟು ನಿಂತಿರುವ ಪಾಲಕಶಕ್ತಿ ಅದು. ಒಂದು ತಲೆಮಾರಿನಲ್ಲಿ ಗುಣಕ್ಕೆ ಅವಹೇಳನವಾಗಬಹುದು, ಶ್ರೇಷ್ಠತೆಗೆ ಅಪಚಾರ ಒದಗಬಹುದು; ಇನ್ನೊಂದು ತಲೆಮಾರಿನಲ್ಲಿ ಅದೆಲ್ಲ ಅಳಿಸಿಹೋಗಿ ಗುಣಕ್ಕೆ ಮನ್ನಣೆಯೂ ಶ್ರೇಷ್ಠತೆಗೆ ಮೆಚ್ಚಿಕೆಯೂ ಸಲ್ಲುವುದು ಖಂಡಿತ. ಲಘುವಾದ್ದು ಈಗ ಕೆಲವು ಆನುಕೂಲ್ಯಗಳಿಂದ ಗುರುವೆನಿಸಿ ಮಂದಿಯನ್ನು ಮೋಸಗೊಳಿಸುತ್ತಿರಬಹುದು; ಒಂದಾನೊಂದು ದಿವಸ ಅದು ಗಾಳಿಯಲ್ಲಿ ಹಾರಿಹೋಗುವುದು ನಿಸ್ಸಂದೇಹ. ಇನ್ನೊಂದು ಅಂಶವನ್ನೂ ಇಲ್ಲಿ ಮನಸ್ಸಿಗೆ ತಂದುಕೊಳ್ಳೋಣ. ಗಾನ, ಪಾನ, ಊಟ, ಉಡುಗೊರೆ, ವಸನ, ವಾಸನೆಗಳಲ್ಲಿಯೂ ಪರಸ್ಪರ ಹೊಂದಿಕೆ ಇಲ್ಲದೇ ಇಲ್ಲ. ರಂಗ, ಕಿಟ್ಟು, ಶಾಮಿಗಳಲ್ಲಿ ಸಿಹಿಯನ್ನು ಕಂಡು ರಂಗನ ಬಾಯಿ ನೀರೂರಬಹುದು, ಕಿಟ್ಟುವಿಗೆ ಖಾರವೇ ಅಧಿಕ ಪ್ರಿಯವಾಗಿ ತೋರಬಹುದು, ಶಾಮಿ ಹುಳಿಯನ್ನು ವಿಶ್ವಾಸದಿಂದ ಚಪ್ಪರಿಸಬಹುದು; ಅದು ಅವರವರ ವೈಯಕ್ತಿಕ ಜಾಯಮಾನ. ಆದರೆ ರಂಗ ಖಾರವನ್ನು ಸಿಹಿಯೆಂದೂ ಕಿಟ್ಟು ಹುಳಿಯನ್ನು ಖಾರವೆಂದೂ, ಶಾಮಿ ಸಿಹಿಯನ್ನು ಹುಳಿಯೆಂದೂ ವ್ಯಮರೆಯುವುದು ಅಸಂಭವ. ಅವರೆಲ್ಲರಿಗೂ ಸಿಹಿ ಸಿಹಿಯೇ, ಖಾರ ಖಾರವೇ, ಹುಳಿ ಹುಳಿಯೇ. ಜಾಜಿಯ ಸುವಾಸನೆ ಒಬ್ಬನಿಗೆ ಬಹು ಇಷ್ಟವಾದ ಪಕ್ಷಕ್ಕೆ ಅವನು ಇತರ ಪರಿಮಳವನ್ನು ಪರಿಮಳವೇ ಅಲ್ಲವೆಂದು ವಾದಿಸಲಾರ. ವಿಷ ನರರೆಲ್ಲರಿಗೂ ಮರಣಕಾರಕವೇ; ಅದನ್ನು ಕುಡಿದು ಬದುಕುವವ ಒಬ್ಬನೇ ಒಬ್ಬ; ನಂಜುಂಡೇಶ್ವರ! ಅಶ್ಲೀಲ

ವಾದ ಗಾರ್ಧಭಹಾಸ್ಯ ಸಕಲ ಗೃಹಸ್ಥರಿಗೂ ಕರುಳನ್ನು ಚಿವುಟಿ ದಂತೆ ನೋವು ಕೊಡುವುದು ನಿಶ್ಚಯ. ಹೀಗೆ ಊಟ ಬಟ್ಟೆ ಮಾತುಗಳಲ್ಲಿ ಇದು ಸರಿ, ಅದು ಅಷ್ಟಕ್ಕಷ್ಟೆ, ಮತ್ತೊಂದು ತಪ್ಪು, ಯಾವುದು ಸೂಕ್ತ, ಬೇರಾವುದು ಸಾಧಾರಣ, ಮತ್ತಾ ವುದು ನಿಷಿದ್ಧ, ಎಂಬ ತಕ್ಕಮಟ್ಟಿಗೆ ಒಮ್ಮತದ ವಿವೇಚನೆ ನಾಗರಿಕ ಜನಾಂಗಗಳಲ್ಲಿ ಆಗಲೇ ಏರ್ಪಟ್ಟು ನೆಲಸಿದೆ. ಆದ್ದ ರಿಂದ "ಲೋಕೋ ಭಿನ್ನ ರುಚಿಃ"ಎಂಬ ಮಾತು ಅಷ್ಟೊಂದು ಕಠೋರವಾಗಿ ಅನ್ವಯಿಸುವಂತೆ ಕಾಣಿಸದು. ಮೇಲಾಗಿ ಪ್ರಪಂಚದ ಉತ್ಕೃಷ್ಟ ಕಲಾಕೃತಿಗಳ ಮೇಲೆ ಪುನಃ ಪುನಃ ವಿಮರ್ಶೆ ನಡೆದು, ಅವುಗಳ ಘನತೆಯ ವಿಚಾರದಲ್ಲಿ ಹೆಚ್ಚು ಕಡಮೆ ಏಕಾಭಿಪ್ರಾಯ ಈಗಾಗಲೇ ನಿರ್ಣಯವಾಗಿಲ್ಲವೆ? ಬಿಡಿ ವಿವರಗಳಲ್ಲಿ ವಿರೋಧಕ್ಕೆ ಅವಕಾಶವಿದೆ; ಅಲ್ಲೊಂದು ಇಲ್ಲೊಂದು ಹೊಸ ಸಂಗತಿ ಆಗಾಗ ಪ್ರತ್ಯಕ್ಷವಾಗುವುದು ಸಾಧ್ಯ: ಆದರೆ ಆವುಗಳ ಪ್ರಧಾನ ಸತ್ವ ಸ್ವಾರಸ್ಯ ಈಗಾಗಲೇ ಚರ್ಚೆಗೆ ಮೀರಿದ ಅಂಶ. ಈ ಕಾರಣಗಳಿಂದ ಕಲಾಭಿರುಚಿ ಯನ್ನು ಏಕವಚನದಲ್ಲಿ ಉಪಯೋಗಿಸುವುದು ತಪ್ಪಲ್ಲ.

ಹಾಗಾದರೆ "ಲೋಕೋ ಭಿನ್ನ ರುಚಿಃ" ಎಂಬ ಹೇಳಿಕೆ ಯಿಂದ ನಮಗೆ ಯಾವ ಉಪಯೋಗವೂ ಇಲ್ಲವೆ? ಇದೆ; ಜನರು ಏನೊಂದನ್ನೂ ಯೋಚಿಸದೆ ಆತುರದಲ್ಲಿ ಅದಕ್ಕೆ ಕೊಡುವ ಅರ್ಥವನ್ನು ನಿರಾಕರಿಸಿದರೆ, ಅದರಿಂದ ಎರಡು ಒಪ್ಪಬಹುದಾದ ತಾತ್ಪರ್ಯಾರ್ಥ ಹೊರಡುತ್ತವೆ. ಮೊದಲನೆ ಯದು: ಸೌಂದರ್ಯ ಒಂದು ವಿಧವಾದ್ದಲ್ಲ, ಅನೇಕ ವಿಧವಾದ್ದು. ಎಲ್ಲರೂ ಮನುಷ್ಯರಾದರೂ, ಸ್ಥಳ, ಸನ್ನಿವೇಶ, ಪ್ರಾಂತ, ಸಮಯ, ಸಂದರ್ಭ, ವ್ಯಕ್ತಿತ್ವ ಮುಂತಾದ ಕಾರಣಗಳಿಂದ

ಭಿನ್ನ ಭಿನ್ನತೆಯನ್ನು ತಳೆದು ನಿಂದಿರುವ ವಿಶಾಲಮಾನವ ಸಂಸಾರವೆಲ್ಲಕ್ಕೂ ಹೃದಯಂಗಮವಾಗುವಷ್ಟು ಲಾವಣ್ಯ ವೈಶಾಲ್ಯ ಕಲೆಯಲ್ಲಿದೆ. “ಇಕ್ಷುಕ್ಷೀರಗುಡಾದೀನಾಂ ಮಾಧುರ್ಯ ಸ್ಯಾಂತರಂ ಮಹತ್ । ತಥಾಪಿ ನ ತದಾಖ್ಯಾತುಂ ಸರಸ್ವತ್ಯಾಪಿ ಶಕ್ಯತೇ ॥” ಎಂದು ಸಂಸ್ಕೃತ ಲಾಕ್ಷಣಿಕ ಆಚಾರ್ಯದಂಡಿ ವ್ಯಾಖ್ಯಾನಮಾಡಿಲ್ಲವೆ? ಎರಡನೆಯದು. ರಸಾನುಭವಕಾರ್ಯ ದಲ್ಲಿ ಬಲಾತ್ಕಾರಕ್ಕೆ ಜಾಗವಿಲ್ಲ. ಒಬ್ಬ ಉಪಾಧ್ಯಾಯ ಚಿಕ್ಕ ವಿದ್ಯಾರ್ಥಿಯೊಬ್ಬನಿಗೆ “ಇದನ್ನು ಓದಿ ಸಂತೋಷಪಡೊ, ಸಂತೋಷಪಡೊ!” ಎಂದು ಗರ್ಜಿಸುತ್ತ, ಅವನ ತಲೆಯನ್ನು ಗೋಡೆಗೆ ಅಪ್ಪಳಿಸುತ್ತಿದ್ದನಂತೆ. ಈ ತೆರದ ದಬ್ಬಾಳಿಕೆ ಸರಸ್ವತಿಯ ಸೇವೆಗೆ ಉಪಕಾರವಲ್ಲ, ಅಪಕಾರ. ಇವತ್ತು ಮಿಲ್ಟನ್ ಕವಿಯನ್ನು ಒಬ್ಬ ಓದಿ ಆನಂದಪಡದೇ ಹೋದರೆ ಅಷ್ಟಕ್ಕೆ ಅವನನ್ನೂ ಆ ವಿಚಾರವನ್ನೂ ಬಿಟ್ಟುಬಿಡಬೇಕು ಸದ್ಯದಲ್ಲಿ; ಅವನನ್ನು ಬೆದರಿಸಿ ನಿರ್ಬಂಧಗೊಳಿಸಿ ಅವನ ಗಂಟಲಿನೊಳಗೆ ಮಿಲ್ಟನ್ನನ್ನು ತುರುಕಲು ಪ್ರಯತ್ನಮಾಡಿದರೆ ಪ್ರಯೋಜನ ಕಡಮೆ. ತನ್ನ ರುಚಿಯನ್ನು ಅವನು ಇನ್ನೂ ನಾನಾಮುಖವಾಗಿ ಬೆಳೆಸಿಕೊಂಡಿಲ್ಲ ಅಷ್ಟೆ. ಆಥೆನ್ಸಿನ ಪ್ರಾಚೀನ ಗ್ರೀಕ್ ಶಿಲ್ಪವನ್ನೂ ಅಜಂತದ ಗುಹಾ ಶಿಲ್ಪವನ್ನೂ ಮಧ್ಯಯುಗದ ಕ್ರೈಸ್ತ ಶಿಲ್ಪವನ್ನೂ ಆಗ್ರದ ಮೊಗಲಾಯಿ ಶಿಲ್ಪವನ್ನೂ ಪ್ರಾಚೀನ ಈಜಿಪ್ಟಿನ ಪರ್ವತಶಿಲ್ಪವನ್ನೂ ಅಮೆ ರಿಕದ ನವೀನ ಶಿಲ್ಪವನ್ನೂ ಒಟ್ಟಿಗೆ ಮೆಚ್ಚಬೇಕೆಂದು ರುಚಿ ಇನ್ನೂ ಹೀಚಾಗಿರುವವರನ್ನು ದಂಡಿಸಿದಿರೆ ಯಾವ ಪುರು ಷಾರ್ಥ? ಅವನ ರುಚಿ ಕ್ರಮಕ್ರಮವಾಗಿ ಮಾಗಿ ಹಣ್ಣಾಗಲಿ;

ಆಗ ಕಲೆಯ ನಾನಾ ದನಿ ಧ್ವನಿ ಗಾಡಿ ಗಾರುಡಿ ಅಲಂಕಾರ ಆಕರ್ಷಣೆಗಳಿಗೆ ಅವನು ಮನಸೋಲುವುದು ಇದ್ದೇ ಇದೆ.

---

೫ ಒಳ್ಳೆಯ ರುಚಿ

ರುಚಿ ತೃಪ್ತಿಕರವಾಗಿದೆಯೆಂಬುದನ್ನು ಕೆಲವು ಲಕ್ಷಣಗಳಿಂದ ತಿಳಿದುಕೊಳ್ಳಬಹುದು.

ಉತ್ತಮ ರುಚಿ ಸಜೀವವಾದ್ದು ; ಪಾದರಸಕ್ಕಿಂತ ಚುರುಕು ಅದರ ಚಟುವಟಿಕೆ. ಅಂದರೆ ಒಂದು ಮಟ್ಟಕ್ಕೆ ಏರಿ ಅಲ್ಲಿ ಕುಳಿತುಬಿಡುವುದಕ್ಕೆ ಅದರ ಚೇತನಧರ್ಮ ಒಪ್ಪದು. ಮೊಗ್ಗು ಬೆಳೆದು ಅರಳುವುದು ; ಹೀಚು ಬಲಿತು ಹಣ್ಣಾಗುವುದು ; ಅವುಗಳ ಆಮೇಲಣ ಆಯುಷ್ಯ ಇಳಿಮುಖ, ಕೊನೆಗೆ ಅವಕ್ಕೆ ಅವಸಾನ. ರುಚಿಯ ಜೀವನ ನದಿಯ ಜೀವನ ; ಮಳೆಗಾಲ ಬಿಸಿಲುಗಾಲವೆರಡರಲ್ಲಿಯೂ ಪೂರ್ಣ ಪ್ರವಾಹದಿಂದ ಹರಿಯುವ ಗಂಗಾನದಿಯ ಜೀವನ. ಒಂದು ವಿಧದಲ್ಲಿ ಭಾವಿಸಿದರೆ ರುಚಿಯ ವಿಕಾಸಕ್ಕೆ ಆದಿಯುಂಟು, ಮಧ್ಯವುಂಟು, ಆದರೆ ಅಂತ್ಯವಿಲ್ಲ. ಮನುಷ್ಯ ಬಾಳಿರುವವರೆಗೂ ಅದು ಬೆಳೆಯುತ್ತಲೇ ಇರುತ್ತದೆ. ಸೌಂದರ್ಯವೆಂಬುದು ಆರ್ಯರು ಹೊಗಳಿದ ಉಷಾದೇವಿಯಂತೆ ಸದಾ ಹೊಸ ಹೊಸ ಕಳೆಗಳಿಂದ ಶೋಭಿಸತಕ್ಕ ಪದಾರ್ಥ. ಯಾನಾಗಲೂ ಪರಿಚಿತವಾದ ಶಕ್ತಿಯೇ

ಆದರೂ ಅದಕ್ಕೆ ದಿನ ದಿನವೂ ಅಚ್ಚರಿಯ ನೂತನ ತೇಜಸ್ಸು. ಈ ನವೀನ ತೋರ್ಕೆಯನ್ನು ಸ್ವಾಗತಿಸಿ ಅನುಭವಿಸಿ ಆನಂದ ಪಡುವ ಚೈತನ್ಯ ಯೋಗ್ಯರುಚಿಯ ಮುಖ್ಯಶೀಲ. ಹಾಗೂ ನವೀಕರಣದ ಗುಲಾಮನೆಂದು ಅದನ್ನು ಬಣ್ಣಿಸಲಾಗದು; ಇವತ್ತೊಂದು, ನಾಳೆ ಮತ್ತೊಂದು, ನಾಡಿದ್ದು ಮಗು ದೊಂದು,—ಈ ಬಗೆಯ ಲಂಪಟತೆಯಲ್ಲ ಅದರ ಜನ್ಮೋದ್ದೇಶ. ಪ್ರಾಚೀನ ಕೃತಿ ಅರ್ವಾಚೀನ ಕೃತಿ, ಹಿಂದಿನ ಕಟ್ಟಡ ಇಂದಿನ ಕಛೇರಿ, ಒಂದು ಕಾಲದ ರಥ ಇನ್ನೊಂದು ಕಾಲದ ಮೋಟಾರು ಗಾಡಿ, ಪಾಶ್ಚಾತ್ಯರ ಸಾಂಘಿಕ ನೃತ್ಯ ಭರತ ಖಂಡದ ಭರತನಾಟ್ಯ, ಹೀಗೆ ಲಾವಣ್ಯ ಎಲ್ಲಿಂದ ಬೀಸಿಬಂದರೂ ಅದಕ್ಕೆ ಲವಲವಿಕೆಯಿಂದ ಮೈಯೊಡ್ಡುವ ಲಾಲಸೆ ರುಚಿಯ ಹೆಗ್ಗುರುತು. ಭಕ್ತನೊಬ್ಬನಿಗೆ ದೇವರು ದಯಪಾಲಿಸಿದ ಪುಷ್ಪ ಎಂದಿಗೂ ಬಾಡದೆ ಒಂದೇ ಸಮನಾಗಿ ಘಮಘಮಿಸುತ್ತಿದೆ ಯೆಂಬ ಐತಿಹ್ಯವನ್ನು ನಾವೆಲ್ಲರೂ ಕೇಳಿದ್ದೇವೆ. ಸಮರ್ಪಕ ವಾದ ರುಚಿ ಆ ಕುಸುಮದ ಹಾಗೆ ಅಜರಾಮರ. ಒಟ್ಟಿನಲ್ಲಿ ಅದೊಂದು ವಿಚಿತ್ರವಿಷಯ : ಅದಕ್ಕೆ ಬಾಲ್ಯ ಯೌವನ ಮಧ್ಯ ವಯಸ್ಸುಂಟು, ಆದರೆ ಮುಪ್ಪಿಲ್ಲ ಸಾವಿಲ್ಲ.

ತೀಕ್ಷ್ಣತೆ ಅದರ ಇನ್ನೊಂದು ಲಾಂಛನ. ಕಲೆಯ ಎಂಥಾ ಗುಟ್ಟನ್ನಾದರೂ ಗ್ರಹಿಸಿಬಿಡುವ ಪ್ರಬಲ ಪರಾಕ್ರಮ ಅದಕ್ಕಿದೆ. ಕ್ಷಿಪ್ರವಾಗಿ ಆಗಲಿ ನಿದಾನವಾಗಿ ಆಗಲಿ ಅಂತು ಕಲೆಯ ಒಳ ಹೊಕ್ಕು ಕಲೆಗಾರನ ಹೃದಯದೊಡನೆ ಮಿಳಿತವಾಗಬಲ್ಲುದರಿಂದ ಅದಕ್ಕೆ ಸಹೃದಯ ಎಂಬುದು ಅಡ್ಡಹೆಸರು. ಕೆಲವು ಪ್ರಾಣಿ ಗಳಿಗೆ ವಿಸ್ಮಯಜನಕವಾದ ಕೆಲವು ಶಕ್ತಿಗಳನ್ನು ಪ್ರಕೃತಿದೇವಿ ಕೊಟ್ಟಿದ್ದಾಳೆ. ಒಂದು ಜಾತಿಯ ನಾಯಿ ಯಾವ ಮನುಷ್ಯನ

ಕಿವಿಯೂ ಕೇಳಲಾರದಷ್ಟು ಸೂಕ್ಷ್ಮವಾದ ಪಿಸುಪಿಸು ಸದ್ದನ್ನು ಕೇಳಬಲ್ಲವಂತೆ; ಕಳ್ಳರು ಅವನ್ನು ಸಾಕಿಕೊಂಡು ಆ ತೆರದ ಸಂಜ್ಞೆಗಳಿಂದ ತಮ್ಮ ಗುಪ್ತಕಸಬನ್ನು ಸಾಧಿಸಿಕೊಳ್ಳುವರಂತೆ. ಬಾವಲಿಗಳೂ ಮೀನುಗಳೂ ಎಂಥಾ ಕಗ್ಗತ್ತಲೆಯಲ್ಲಾದರೂ ಸುರಕ್ಷಿತವಾಗಿ ಓಡಾಡಬಲ್ಲವು; ದಾರಿಯಲ್ಲಿ ಅಡಚಣೆಗಳನ್ನೊಡ್ಡಿ ಪ್ರಾಣಿಶಾಸ್ತ್ರಜ್ಞರು ಪ್ರಯೋಗ ನಡೆಸಿ ನೋಡಿದ್ದಾರೆ: ಪ್ರತಿಬಂಧಕಗಳನ್ನು ಸುಲಭವಾಗಿ ಗುರ್ತಿಸಿ ಶರೀರಕ್ಕೆ ಅಪಾಯ ತಟ್ಟದಂತೆ ಅವನ್ನು ದಾಟಿಕೊಂಡು ಹೋಗಿವೆ ಆ ಪ್ರಾಣಿಗಳು. ಅವಲ್ಲಿ ಯಾವುದೋ ಒಂದು ಅತೀಂದ್ರಿಯ ಬಲ ಇರಬೇಕೆಂದು ಊಹಿಸಬಹುದು. ಕಲೆಯನ್ನು ಕೂಲಂಕಷವಾಗಿ ಬಲ್ಲವನ ರುಚಿಯೂ ಈ ಬಗೆಯ ಅಸಾಧಾರಣ ವ್ಯಾಪಾರವನ್ನು ಪ್ರದರ್ಶಿಸಬಲ್ಲದು. ಒಂದು ಎಚ್ಚರಿಕೆ ಇಲ್ಲಿ ಅಗತ್ಯ. ಶಸ್ತ್ರ ವೈದ್ಯನ ಸೂಜಿಯಂತೆ ಕೊರೆದುಕೊಂಡು ಹೋಗುವ ಸತ್ವವೇನೋ ಇರಬೇಕು ರುಚಿಗೆ. ಆದರೆ ಎಲ್ಲ ಕಲೆಯಲ್ಲಿಯೂ ರಸಿಕರು ಆಸಕ್ತಿಪೂರ್ವಕವಾಗಿ ಕೈಗೊಳ್ಳಬಹುದಾದ ಸಾಹಸಕ್ಕೂ ಸಿಲುಕದ ಅತಿಗೂಢವಾದ ಅಂತರಾರ್ಥ ಯಾವುದೋ ಇದ್ದೇ ಇರುತ್ತದೆ ಎಂಬ ಅನುಮಾನದಲ್ಲಿ ನಾವು ಆತಂಕಪಡಬೇಕಾಗಿಲ್ಲ. ಗಹನವೂ ಉಚ್ಚವೂ ಉದಾತ್ತವೂ ಆದ ಭಾವ ಭಾವನೆಗಳು ಉತ್ತಮ ಕಲೆಯಲ್ಲಿ ಅಡಗಿರುವುದು ನಿಜ; ಅವನ್ನು ಕರಗತ ಮಾಡಿಕೊಳ್ಳಲು ನಾವು ಎಡೆಬಿಡದೆ ದುಡಿಯಬೇಕಾದ್ದು ನ್ಯಾಯ. ಆದರೆ ಕಠಕಷ್ಟವಾದ ಸಂಕೇತಾಭಿಪ್ರಾಯ ಗುಹ್ಯ ವಿದ್ಯೆಗೆ ಸರಿಯಾದ್ದು; ಅಲ್ಲಿ ಮಾತು ಮಾತಿಗೂ ಅಕ್ಷರ ಅಕ್ಷರಕ್ಕೂ ತಾರ್ಕಿಕ ತೊಡಕುಗಳನ್ನೊಡ್ಡಿ ಕುಗ್ಗದ ಕೊನೆಯಿಲ್ಲದ ಜಿಜ್ಞಾಸೆಯನ್ನು ಲಂಬಿಸಬಹುದು. ಪ್ರಸಂಗವೆಂದಿಗೂ ಅಷ್ಟು

ಕಠಿಣವಲ್ಲ ಕಲಾಪಾರಾಯಣದಲ್ಲಿ. ಅಂಥಾ ಘೋರಗೂಡ ತೆಯ ಕಳೆ ಇದ್ದರೆ ಅದು ರಾಕ್ಷಸ ಕಲೆ, ಕಲೆಯ ವಿಕಟಾನು ಕರಣ; ಅದರ ತಂಟೆ ನಮಗೆ ತರವಲ್ಲ. ಕಲೆಗಾರನ ಇಂಗಿತ ವೇನು; ಅವನು ಆರಿಸಿಕೊಂಡಿರುವ ಸಾಧನಗಳಾವುವು; ಅವನ್ನು ಉಪಯೋಗಿಸುವ ರೀತಿ ಎಂತು; ಆತನ ಇಚ್ಛೆ ಸಫಲವೇ ಅರ್ಧಮರ್ಧವೇ ವಿಫಲವೇ;—ಇವು ಸಾಧಾರಣ ವಾಗಿ ಕಲಾನುಭವದಲ್ಲಿ ನಾವು ಧ್ಯಾನಿಸಬೇಕಾದ ಪ್ರಶ್ನೆಮಾಲೆ. ಕಲೆ ನಿಶ್ಚಯವಾಗಿ ಲಲಿತಕಲೆ; ವಿಶೇಷವಾಗಿ ಹ್ಲಾದೈಕ ಮಯಿ; ಅದರ ಸ್ವಾರಸ್ಯವನ್ನು ಉಂಟಲು ನಾವು ತೆಗೆದು ಕೊಳ್ಳುವ ತೊಂದರೆ ನಮಗೆ ಬೇಕೆನ್ನಿಸುವ ಸುಖವೇದನೆ. ಅದರ ಹಿರಿಯರ್ಥ ಅಮಾವಾಸ್ಯೆಯ ಗವಿಯೊಳಗೆ ಕಗ್ಗತ್ತಲಿನ ಹಗೇವಿನಲ್ಲಿ ಹೂತಿಟ್ಟಿರುವ ಗಾಳಿಯ ಪೆಟ್ಟಿಗೆ ಬಚ್ಚಿಟ್ಟುಕೊಂಡಿ ರುವ ಮಬ್ಬು ಒಗಟೆಯಲ್ಲ; ಭೂಮಿಯ ಕೆಳಪದರಗಳಲ್ಲಿ ಅಡ ಗಿರುವ ಚಿನ್ನ: ಅಂದರೆ ಅದನ್ನು ಪಡೆಯುವುದು ಕಷ್ಟಸಾಧ್ಯ, ಅಸಾಧ್ಯವಲ್ಲ.

ತಾರತಮ್ಯ ವಿವೇಕದಲ್ಲಿ ಮಿಗಿಲೆನಿಸಿದ ರುಚಿ ಶುದ್ಧರುಚಿ. ಲಾ ಬ್ರೂಯೇರನ ಹೇಳಿಕೆಯಂತೆ ಆ ಗುಣ ಮುತ್ತು ರತ್ನ ಕ್ಕಿಂತಲೂ ಅಪೂರ್ವ. ಇದು ಸೂಕ್ಷ್ಮ ಅದು ಸ್ಥೂಲ, ಇದು ಪುಷ್ಟ ಅದು ದುಷ್ಟ, ಇದು ನಯ ಅದು ಒರಟು, ಎಂಬ ಸುಲಭ ವರ್ಗೀಕರಣಕ್ಕೆ ಕೊಂಚ ಅಭ್ಯಾಸ ಸಾಕು. ಅನೇಕ ರಲ್ಲಿ ಅದೂ ಕೂಡ ಅಸಮರ್ಪಕ. ಬೆಟ್ಟದ ಮೇಲೆ ಯಾವುದು ಬೆಳಗಿದರೂ ಅದನ್ನು ನಕ್ಷತ್ರವೆಂದು ಅವರು ನಂಬಿಬಿಡುವರು. ಅವರಿಗೆ ಅಚ್ಚಾದುದೆಲ್ಲ ಸಾಹಿತ್ಯ; ಬಣ್ಣದಿಂದಿಸುವುದೆಲ್ಲ ಚಿತ್ರಕಲೆ; ಹಾಡಿದ್ದೆಲ್ಲಾ ಸಂಗೀತ; ಕಾಲು ಕೈ ಕುಣಿಸಿದ್ದೆಲ್ಲ

ನಾಟ್ಯ, ರಂಗದ ಮೇಲೆ ನಡೆದದ್ದೆಲ್ಲಾ ನಾಟಕ. ವಿಜಯ ನಗರದ ಆಸ್ಥಾನದಲ್ಲಿ ಒಂದುಬಾರಿ ಕಲೆಗಾರರ ಕೂಟವೇರ್ಪಟ್ಟಿತಂತೆ; ಆಗಂತುಕ ರೂವಾರಿಯೊಬ್ಬ ಒಂದು ವರ್ತುಳವನ್ನು ಬರೆದು ಕುಳಿತುಬಿಟ್ಟನಂತೆ; ಅವನಿಗೆ ಮೊದಲನೆಯ ಬಹುಮಾನವನ್ನು ಇತ್ತರಂತೆ: ಬರಿಯ ಒಂದು ಗೆರೆಯನ್ನು ಎಳೆಯುವುದರಲ್ಲಿಯೂ ಮಿತಿಯಿಲ್ಲದ ಚಾತುರ್ಯಕ್ಕೆ ಅವಕಾಶವುಂಟು. ಕೂದಲನ್ನು ಬಿಡಿಸಿ ಬಿಡಿಸಿ ಚಿತ್ರಿಸುವುದರಲ್ಲಿ ಆಲ್ಬರ್ಟ್ ಡ್ಯೂರರನ ಕೈಚಳಕವೆಷ್ಟಿದ್ದಿತೆಂದರೆ ಆ ಕೆಲಸಕ್ಕೆ ಪ್ರತ್ಯೇಕವಾದ ಕುಂಚಗಳನ್ನಿಟ್ಟುಕೊಂಡಿದ್ದಾನೆಯೋ ಏನೋ ಎಂಬ ಸಂದೇಹ ಕಲೆಗಾರರಲ್ಲಿ ಕೂಡ ಬಹುದಿವಸ ಇತ್ತು. ಈ ಕಥೆ ಪ್ರಾಯಶಃ ಸರ್ವರಿಗೂ ಪರಿಚಯ; ಇಬ್ಬರು ಚಿತ್ರಗಾರರು ಪೈಪೋಟಿ ಹೂಡಿದರಂತೆ; ಒಬ್ಬ ಹಣ್ಣಿನ ಗೊಂಚಲನ್ನು ಬರೆದು ಹೊರಗಿಡಲು ಹಕ್ಕಿಗಳು ಅದು ನಿಜವೆಂದು ಚಾಪಲ್ಯದಿಂದ ಅದಕ್ಕೆ ಎರಗಿದವು; ಎರಡನೆಯವನು ಒಂದು ತೆಳುವಾದ ಪರದೆಯ ಹಿಂದೆ ಏನೋ ಇರುವಂತೆ ಚಿತ್ರಿಸಿದ; ಅದನ್ನು ನೋಡಿ ಅವನ ಸ್ಪರ್ಧಾಳು ಕೇಳಿದನಂತೆ: “ಎಲ್ಲಿ, ಪರದೆಯನ್ನು ಕೊಂಚ ಓರೆಮಾಡು; ಹಿಂದೆ ಇರುವುದನ್ನು ನೋಡೋಣ!” ಮನುಷ್ಯನನ್ನು ಮರುಳುಗೊಳಿಸಿದ ಈ ಜಾಣತನ ಹೆಚ್ಚಿನದೆಂದು ಎಲ್ಲರೂ ಸಮ್ಮತಿಸಿದರು. ಕಲೆಯಲ್ಲಿ ಅತ್ಯಂತಾಧಮ ಅಧಮ ಸಾಧಾರಣ ಮಧ್ಯಮ ಉತ್ತಮ ಉತ್ತಮೋತ್ತಮವೆಂಬ ಹಲವು ತರಗತಿಗಳುಂಟು. ಆಯಾ ದರ್ಜೆಯ ಕಲೆಯನ್ನು ಅದಕ್ಕನುರೂಪವಾಗಿ ಮರ್ಯಾದೆಮಾಡುವ ಯುಕ್ತಾಯುಕ್ತ ವಿವೇಚನೆ ಅತಿ ಆವಶ್ಯಕ. ನ್ಯಾಯತಕ್ಕಡಿಯನ್ನು ನಿಷ್ಪಕ್ಷಪಾತದಿಂದ ಹಿಡಿದು ಕಲೆಯ ಬೆಲೆಯನ್ನು ತೂಗಬೇಕು.

ಎಲ್ಲರೂ ಸಭ್ಯರು ಎಂಬ ಕುರುಡು ನಂಬಿಕೆಯುಳ್ಳವನಿಗೆ ಲೋಕ ರೀತಿ ಹೇಗೆ ತಿಳಿಯದೋ ಹಾಗೆ ಎಲ್ಲ ಕಲೆಯೂ ಸಮರ್ಪಕ ವೆಂದು ಬಗೆಯುವವನಿಗೆ ಕಲಾಸ್ವರೂಪವೇ ಹೊಳೆಯದು. ಅಂದರೆ ಕೆಲವನ್ನು ಮಾತ್ರ ತೆಗೆದುಕೊಂಡು ಉಳಿದುವನ್ನು ತ್ಯಜಿಸಬೇಕೆಂದಲ್ಲ; ಎಲ್ಲ ಗುಂಪನ್ನೂ ಲಕ್ಷಿಸುವುದು ಫಲ ದಾಯಕ. ಆದರೆ ಕಪಟ ಕೃತ್ರಿಮಗಳಿಗೆ ಸಿಕ್ಕದೆ, ಯಾವುದ ರಲ್ಲಿ ಎಷ್ಟು ಮಹಿಮೆಯಿದೆ, ಯಾವುದರಿಂದ ಎಷ್ಟು ಆತ್ಮ ತುಷ್ಟಿ ಎಂಬುದನ್ನು ಸ್ಪಷ್ಟವಾಗಿ ವಿವೇಚಿಸದಿದ್ದರೆ ಅನರ್ಥ. ಕಲಾನುಭವ ಒಂದು ಭಾರಿ ನಿಚ್ಚಣಿಗೆಯನ್ನು ಏರಿದಂತೆ: ಮೆಟ್ಟಲು ಮೆಟ್ಟಲಾಗಿ ಮೇಲಕ್ಕೆ ಹತ್ತುವಾಗ ಕುಟ್ಟೆಹುಳು ತಿಂದು ಖಿಲವಾದ ಮೆಟ್ಟಲಿನ ಮೇಲೆ ನಾವು ಕಾಲಿಡುತ್ತೇ ವೆಯೆ? ಹಾಗೆಯೇ ಮೂರನೆಯ ಮೆಟ್ಟಲನ್ನು ನಾವು ನಿರಾ ಕರಿಸದಿದ್ದರೂ ಅದು ಆರನೆಯ ಮೆಟ್ಟಲು ಎಂದು ಮೋಸ ಹೋಗುತ್ತೇವೆಯೆ?

ಸಾಹಿತ್ಯದಿಂದ ಕೆಲವು ಉದಾಹರಣೆಗಳನ್ನು ತೆಗೆದುಕೊ ಳ್ಳೋಣ. ಕವಿಯ ಭಾಷೆಗೆ ನಾಲ್ಕು ಮುಖ; ಶಬ್ದ ಶೈಲಿ ಅರ್ಥ ಧ್ವನಿ. ಶಬ್ದವನ್ನೂ ಶೈಲಿಯನ್ನೂ ಅವಕ್ಕೋಸ್ಕರಲೇ ಉಪ ಯೋಗಿಸುವುದು ಸಮನಲ್ಲ; ಅವನ್ನು ಅರ್ಥ ಧ್ವನಿಗಳ ಸಲು ವಾಗಿ ಉಪಯೋಗಿಸಬೇಕಾದ್ದು ಕವಿಯ ಕರ್ತವ್ಯ. ಸಾಹಿತ್ಯ ಕುಟುಂಬದಲ್ಲಿ ಧ್ವನಿ ಮನೆದೇವರು, ಅರ್ಥ ಯಜಮಾನ, ಶೈಲಿ ಯಜಮಾನಿ, ಶಬ್ದ ಸೇವಕ. ಒಂದೇ ರೀತಿಯ ಸಪ್ಪಳ ವನ್ನು ಕೊಡುವ ಮಾತನ್ನು ಅಥವಾ ಮಾತಿನ ಭಾಗವನ್ನು ತಿರುತಿರುಗಿ ಉಚ್ಚರಿಸುವುದಕ್ಕೆ ಪ್ರಾಸವೆಂದು ಹೆಸರು. ಆದಿ ಪ್ರಾಸದ ಈ ಕೆಲವು ವಾಕ್ಯಗಳಲ್ಲಿ ವ್ಯಕ್ತವಾಗುವ ತಾರತಮ್ಯ

ವನ್ನು ಗಮನಿಸಿ. (೧) "ಮುನಿದು ಮೂದಲಿಸಿ ಮೋಡಿ ಯೊಳಿದ್ದು ಮೂರ್ಖಿಪ ಮೊನೆಗಾತಿ ಯಾಕೃತಿಗೇಳೆ। ಇನಿಯನ ಮೊಗವ ನೋಡದಮುನ್ನ ಮೋಹಿಸಿ ಮನಗರಗುವಳು ಮತ್ತೇನು ॥ ಇಲ್ಲಿನ ಅರ್ಥ ಕೇವಲ ಸಾಮಾನ್ಯವಾದ್ದು; ಗರ್ವದ ಮಡದಿ ಈ ಗ್ರಂಥವನ್ನು ಓದಿದರೆ ನಮ್ರ ಹೆಂಡತಿ ಯಾಗುವಳು. ಕವಿ ಹತ್ತುಬಾರಿ "ಮ" ಕಾರವನ್ನು ಏತಕ್ಕೆ ಪ್ರಯೋಗಿಸಿದಳೋ ತಿಳಿಯದು. ಅದು ನಿಶ್ಚಯವಾಗಿ ಅನ ಗತ್ಯ, ಆಲಸ್ಯಕರ. (೨) ತಾರಕಾಸುರನ ಬಾಧೆಯನ್ನು ತಾಳ ಲಾರದೆ ದೇವತೆಗಳು ಈಶ್ವರನ "ದ್ವಾರವಳಯದ ಮುಂದೆ ಮುಂದ್ರೈಸಿ ಮುದವಳಿದು ಮದವಡಗಿ ಮೆದೆಗೆಡೆದು ಮುಂದು ಗೆಟ್ಟು ಸಂದಣಿಸಿ ನಿಂದು" ಗೋಳಿಟ್ಟರು. ಇಲ್ಲಿ ವಿಷಯ ಚೆನ್ನಾಗಿ ವರ್ಣಿತವಾಗಿದೆ; ಶಬ್ದದಿಂದ ಅರ್ಥಕ್ಕೆ ನಿಜವಾದ ಸಹಾಯ ದೊರತಿದೆ. (೩) "ಪುರದ ಪುಣ್ಯಂ ಪುರುಷರೂ ಪಿಂದೆ ಪೋಗುತಿದೆ." ಪ್ರಾಸದಿಂದ ಇನ್ನೂ ಹೆಚ್ಚಿನ ಪುಷ್ಟಿ ಅರ್ಥಕ್ಕೆ ಇಲ್ಲಿ ಒದಗಿದೆ. ಪ್ರೀತಿಯ ಮಹಾರಾಜ ಹರಿಶ್ಚಂದ್ರ ಆಯೋಧ್ಯೆಯನ್ನು ವಿಶ್ವಾಮಿತ್ರನಿಗಿತ್ತು ಅಲ್ಲಿಂದ ಹೊರಹೊರ ಟಾಗ ಅಲ್ಲಿನ ಜನತೆಗೆ ಉಂಟಾದ ನಷ್ಟ ಹೇಗೆ ಸುವ್ಯಕ್ತ ವಾಗಿದೆ ಭಾವಿಸಿ. ಹರಿಶ್ಚಂದ್ರನೊಡನೆ ನಡೆದುಹೋಗುತ್ತಿರು ವಂತೆ ನೇಮಿಸಿ ಪುರದ ಸೌಭಾಗ್ಯವನ್ನು ನಮ್ಮ ಕಣ್ಣೆದಿರು ಎಷ್ಟು ಸ್ವಾರಸ್ಯವಾಗಿ ತಂದಿದ್ದಾನೆ ಕವಿ! (೪) "ಮೃತ್ಯು ಮರೆಹೊಕ್ಕಳು ಮಹೇಶ್ವರನ" ಇದು ಕವಿಶ್ರೇಷ್ಠನಿಗೆ ಸಾಧ್ಯ ವಾದ ಮಹಾಪ್ರಾಸ. ಅಭಿಮನ್ಯುವಿನ ಮರಣದಲ್ಲಿ ಅರ್ಜುನ ನನ್ನು ಎಂಥಾ ಕೋಪ ಆವರಿಸಿತು, ಅದರ ಪ್ರಭಾವ ಎಷ್ಟಿತ್ತು, ಎಂಬುದೇ ಕವಿಯ ಪ್ರತಿಭಾಯುಕ್ತವಾದ ವಿವರಣೆ. ಮಗ

ನನ್ನು ಹೇಗೋ ನುಂಗಿಬಿಟ್ಟಾಯ್ತು; ಆದರೆ ತಂದೆಯ ಮುಂದೆ ನಿಲ್ಲುವುದೆಂತು ? ಧನಂಜಯನ ರೋಷಕ್ಕೆ ಇತರರು ಅಂಜುವು ದಿರಲಿ, ಸಮಸ್ತ ಜೀವವನ್ನೂ ಅಂಜಿಸುವ ಮೃತ್ಯುದೇವಿಯೇ ಅಂಜಿಬಿಟ್ಟಿದ್ದಾಳೆ; ಇದೊಂದೇ ಮಾರ್ಗವೆಂದು ಸಂಹಾರ ಸ್ವಾಮಿಯಾದ ಮೃತ್ಯುಂಜಯನ ಶರಣು ಹೊಕ್ಕಿದ್ದಾಳೆ. "ಮ" ಕಾರ ಮೂರುಸಾರಿ ಬಂದು ಅರ್ಥವನ್ನು ಒತ್ತಿಹೇಳಿ ಧ್ವನಿಯನ್ನು ಎತ್ತಿಹಿಡಿದು ವಾಕ್ಯವನ್ನು ಅತ್ಯುತ್ತಮ ಸಾಹಿತ್ಯ ವನ್ನಾಗಿ ಮಾಡಿದೆ.

ಕವಿಗಳು ಬಳಸುವ ಉಪಮಾನಗಳಲ್ಲಿ ಎಷ್ಟೋ ಅಂತರ ಗಳನ್ನು ನಾವು ದೃಷ್ಟಿಸಬಹುದು. ೧) "ದೇವರ ಕೃಪೆ ನಮ್ಮ ತಲೆಯ ಮೇಲೆ ಕೊಡೆಯಂತೆ ಇದೆ." "ಆಳುವ ಅವಳ ಕಣ್ಣು ಗಳು ಎರಡು ಸಂಕ್ಷಿಪ್ತ ಸಮುದ್ರಗಳು." "ಪ್ರಣಯಿಗಳು ಕಂಪಾಸಿನ ಎರಡು ಕಾಲುಗಳಂತೆ: ಒಂದು ಅಚಲವಾಗಿ ನಿಂತಿರಲು ಇನ್ನೊಂದು ಅದರ ಸುತ್ತ ಗುಂಡಗೆ ಸುತ್ತಿ ಕಡೆಗೆ ಅದರ ಹತ್ತಿರ ಬಂದು ತಂಗುತ್ತದೆ." ಇಂಥಾ ವಿಕಾರ ಸಾದೃಶ್ಯ ವನ್ನು ಹೇಳುವುದು ವರ್ಣಿತ ವಸ್ತುವಿನ ಘನತೆಗೆ ಕುಂದು. ಕುಕವಿಗಳ ಈ ವಿಧದ ನುಡಿಕಟ್ಟು ಅಂದದ ಕವಿತೆಯಲ್ಲ, ಕವಿತೆಯ ಆಭಾಸ. ೨) ಶಕಾರನ ವಚನಗಳು : "ಸೂರ್ಯ ಕೋಪಹೊಂದಿದ ಕೋತಿಯಂತೆ ಕಾಣುತ್ತಾನೆ." "ರಥ ಮುದಿ ಹಂದಿಯ ಹಾಗೆ ಘರ್ ಘರ್ ಎನ್ನುತ್ತಿದೆ." "ವಿಶ್ವಾವಸುವಿನ ತಂಗಿಯಾದ ಸುಭದ್ರೆಯನ್ನು ಹನುಮಂತ ಎತ್ತಿಕೊಂಡು ಹೋದಂತೆ ನಾನು ನಿನ್ನನ್ನು ಅಪಹರಿಸುವೆನು." "ಭಾರತ ದಲ್ಲಿ ಸೀತಾನಾರಿಯನ್ನು ಚಾಣಕ್ಯ ಕೊಂದುಹಾಕಿದ ಹಾಗೆ ನಿನ್ನನ್ನು ನಾನು ಕೊಲ್ಲುವೆನು." ಇಲ್ಲಿ ಹೋಲಿಕೆ ಗ್ರಾಮ್ಯವಾಗಿ

ಕುರೂಪವಾಗಿ ಹುಚ್ಚು ಹುಚ್ಚಾಗಿ ಹಾಸ್ಯಾಸ್ಪದವಾಗಿದೆ. ಮಾತನಾಡುವವನು ನಮ್ಮ ಹಳೆಯ ಗೆಳೆಯ ಶಕಾರನಲ್ಲವೆ? ಅವನ ಕ್ಷುದ್ರಗುಣ ಇದರಲ್ಲಿ ಸಲಕ್ಷಣವಾಗಿ ಒಡೆದುಮೂಡಿದೆ. (೩) "ಕೌರವರ್ಗೆಲ್ಲಂ ಪ್ರಾಣಂ ಬರ್ಪಾಕೃತಿಯೊಳೆ ಬಾಣಾಸನ ಬಾಣಪಾಣಿ ಕರ್ಣಂ ಬಂದಂ" ಬಸವ ಕಿನ್ನರಯ್ಯ ಸಂಧಿಸಿ ಒಬ್ಬರನ್ನೊಬ್ಬರು ಅಪ್ಪಿಕೊಂಡಾಗ, "ಹಾಲೊಳಗೆ ಹಾಲಂ ಕರಂ ಜೆರಸಿದಂತಾಯ್ತು." "ಆ ಪಿತೃಲೋಕದಲ್ಲಿ ಆತ್ಮಗಳು ಶರದೃತು ತಲೆದೋರಿದೊಡನೆ ಕಾಡಿನಲ್ಲಿ ಉದುರಿ ನೆಲದಮೇಲೆ ಬಿದ್ದಿರುವ ಹಣ್ಣೆಲೆಗಳಂತೆ ಸಂದಣಿಸಿದ್ದುವು." ಬಳಕೆಯ ಮಾತಿನಂತೆ ಇವು ಸರಳವಾಗಿ ಸ್ವಾಭಾವಿಕವಾಗಿ ಇವೆ; ಕವಿ ರಚನೆಗೈದ ಅಲಂಕಾರದಂತೆ ತೋರುವುದೇ ಇಲ್ಲ. ೪) "ಮಂದಃ ಕವಿಯಶಃಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಮ್। ಪ್ರಾಂಶು ಲಭ್ಯೇ ಫಲೇ ಲೋಭಾತ್ ಉದ್ಬಾಹುರಿವ ವಾಮನಃ ॥" "ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆ ಗೊರುವಂತೆ" ಸೀತೆ ಬಿದ್ದಳು. "ಸಂದ ಕಾರಿರುಳ ಕನ್ನೆಯರು ಹಗಲಂ ನೋಡಲೆಂದು ಬಂದರೋ" ಎಂಬಂತೆ ಚಂಡಾಲ ಸ್ತ್ರೀಯರು ಒಪ್ಪಿದರು. "ನನ್ನ ಪದ್ಯಗಳು ಕಂಬನಿಗಳಲ್ಲಿ ತಮ್ಮ ರೆಕ್ಕೆಯನ್ನು ಅದ್ದಿ ತೆರಳಿಹೋಗುವ ಚಾತಕಪಕ್ಷಿಗಳ ಹಾರುವಿಕೆಯಂತೆ ಚಿಕ್ಕವು." ಕವಿ ಯತ್ನಪಟ್ಟು ಹೆಣೆದಿರುವ ಉಪಮಾಲಂಕಾರವನ್ನು ಇಲ್ಲಿ ನೋಡಬಹುದು. ಯಾವುದಾದರೊಂದು ಸಾದೃಶ್ಯವನ್ನು ಕೊಡಲೇಬೇಕು ಎಂಬ ಮನೋಭಾವದಿಂದ ಕವಿ ಯೋಚಿಸಿ ಬರೆಯುವ ಗ್ರಾಂಥಿಕ ವ್ಯವಸಾಯಕ್ಕೆ ಇವು ನಿದರ್ಶನ. ಇವುಗಳಲ್ಲಿ ಕಲ್ಪನೆಯ ಚಮತ್ಕಾರವಿದೆ, ಉತ್ಕೃಷ್ಟ ಕವಿತೆಯ ವರ್ಚಸ್ಸಿಲ್ಲ. ೫) ತ್ರಿಜಟೆ ಸ್ವಪ್ನದಲ್ಲಿ

ಕಂಡದ್ದು: “ ರಾಮೇಣ ಸಂಗತಾ ಸೀತಾ ಭಾಸ್ಕರೇಣ ಪ್ರಭಾ ಯಥಾ.” “ ದಶಾಸ್ಯನೊಂದು ತಣ್ಬುಳಿಲ ತಾಣದೊಳ್ ಬರ ಸಿಡಿಲ ಬಳಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡಂ.” “ಗಾಢಾಲೋಚನೆಯಲ್ಲಿ ಮಗ್ನನಾಗಿ ಆವ ಬೇಸಗೆಯ ಮೋಡ ಮಂದಗಮನದಲ್ಲಿ ಮುಂದೆ ಹೋಗುವಂತೆ ಮುಂದುವರಿದ.” “ಆಕಾಶದಲ್ಲಿ ಒಂದೇ ಒಂದಾಗಿ ಹೊಳೆಯುವ ಚುಕ್ಕಿಯಂತೆ ಅವಳು ಚೆಲುವೆ” ಇಲ್ಲಿ ಸ್ವಾರಸ್ಯ ಹೇರಳವಾಗಿದೆ. ಹೋಲಿಕೆ ನಿರ್ಮಲವೂ ಸುಸಂಗತವೂ ಆಗಿ ವಿಷಯವನ್ನು ಪವಿತ್ರಗೊಳಿಸಿದೆ. ಸೂಚಿತ ವಾಗುವ ಧ್ವನಿಯನ್ನೂ ಲಕ್ಷಿಸಬೇಕು. ೬) ಅಷ್ಟಾವಕ್ರನ ಮೇಲೆ ಪಾಪಪ್ರಣಯ ಉಂಟಾದ ಅನೃತಮತಿಗೆ “ ಜೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ ಪತಿಯೊಳಿಳಿದಾಯ್ತು ಮನಂ.” ಭೀಮನನ್ನು ಕಂಡು ಹಿಡಿಂಬಿ ಹೇಳುತ್ತಾಳೆ: “ ಪಡೆ ನೋಡಲ್ ಬಂದವರಂ ಗುಡಿವೊರಿಸಿದರೆಂಬುದಾಯ್ತು ನಿನ್ನಿಂದೆನ್ನಂ.” “ಒಂದು ಘಂಟೆ ರಂಗದ ಮೇಲೆ ಬಿಗು ಮಾನದಲ್ಲಿ ಅಡ್ಡಾಡಿ ಗಲಭೆಮಾಡಿ ತರುವಾಯ ಮೌನದಲ್ಲಿ ಮಾಯವಾಗಿ ಹೋಗುವ ಬಡನಟನಲ್ಲವೇ ಬಾಳುವೆ ? ” ಇವು ಸಾಮಾನ್ಯವಾದರೂ ಅಸಾಮಾನ್ಯವಾಗಿ ತೋರಿ, ಸುಲಭ ವಾದರೂ ದೊಡ್ಡ ಅರ್ಥವನ್ನು ಪ್ರತಿಪಾದಿಸಿ, ಉತ್ತಮ ಉಪಮಾನಗಳಾಗಿವೆ. ಕವಿಗಳ ವ್ಯಕ್ತಿತ್ವವನ್ನು ಸಾರುತ್ತಿವೆ. ೭) ಉತ್ತರನ ಉಕ್ತಿ: “ ಹಸಿದ ಮಾರಿಯ ಮಂದೆಯಲಿ ಕುರಿ ನುಸುಳಿದಂತಾದೆನು ಬೃಹನ್ನಳೆ.” ಘಟೋತ್ಕಚ “ ಕಾರಿರುಳ ಪಟ್ಟಣಕೆ ಚಂದ್ರನ ತೋರಣವ ಬಿಗಿದಂತೆ” ಸೊಗಯಿಸಿದ. ಭರದ್ವಾಜ ಪಕ್ಷಿಯ ಪ್ರಶಂಸೆ: “ ನಿನ್ನಿಂದ

ಉದುರುವ ಸ್ವರಮಾಧುರ್ಯದ ಹನಿಗಳು ಮಳೆಬಿಲ್ಲಿನ ಮೋಡ ಗಳು ಸುರಿಯುವ ಹನಿಗಳಿಗಿಂತ ಹೆಚ್ಚು ಪ್ರಕಾಶ." ಇಲ್ಲಿ ಅಪೂರ್ವ ಹೋಲಿಕೆಗಳು ಬಂದು ವಿಷಯಕ್ಕೆ ಅಸದೃಶ ಪ್ರಭೆ ಯನ್ನು ಕೂಡಿಸಿವೆ. ಕವಿಯದು ಧೈರ್ಯದಿಂದಲೂ ಉತ್ಸಾಹ ದಿಂದಲೂ ಎದ್ದು ನಿಂತಿರುವ ವ್ಯಕ್ತಿತ್ವವೆಂಬುದು ಸ್ಪಷ್ಟವಾಗಿದೆ. (ಲ) ಕೌರವ ಅಶ್ವತ್ಥಾಮನಿಗೆ ಹೇಳುತ್ತಾನೆ: "ಒಪ್ಪದಿದು ಭೀಷ್ಮಾದಿ ಜನ್ಮನದರ್ಪದಲಿ ಜಾರಿದ ಜಯಾಂಗನೆ ಮುಪ್ಪಿ ನಲಿ ನಮಗೊಲಿವುದರಿದು." ಹುಟ್ಟು—ಸಾವಿನ ಸಮಸ್ಯೆ; "ಬಗೆಬಣ್ಣದ ಗಾಜಿನ ಗುಮ್ಮಟದಂತಿರುವ ಜೀವನ ಮೃತ್ಯು ತನ್ನನ್ನು ಕಾಲಿನಲ್ಲಿ ತುಳಿದು ಚೂರುಚೂರು ಮಾಡುವವರೆಗೂ ನಿತ್ಯತೆಯ ರಜತರಶ್ಮಿಯನ್ನು ಮಲಿನಗೈಯುತ್ತದೆ." ಬಹಳ ಅರ್ಥವನ್ನೂ ಧ್ವನಿಯನ್ನೂ ಗರ್ಭೀಕರಿಸಿಕೊಂಡಿರುವ ಈ ಉಪಮಾನಗಳು ಅತ್ಯಂತ ಮೇಲುಮಟ್ಟದವು. ಸಾಧಾರಣ ಊಹಾಶಕ್ತಿ ತಂತ್ರದಿಂದ ಹಿಡಿಯಬಲ್ಲ ಬಾತುಗಳಲ್ಲ ಇವು; ವಿಪುಲ ಪ್ರತಿಭೆ ಮಂತ್ರಪೂರ್ವಕವಾಗಿ ಕರೆಯುವ ಮಾನಸ ಹಂಸ. ಈ ಬಗೆಯ ವಿರಚನೆ ಮಹಾಕವಿಗೆ ಮಾತ್ರ ಸಾಧ್ಯ ವೆಂದು ಬೇರೆ ಹೇಳಬೇಕಾಗಿಲ್ಲ.

ಹೀಗೆ ಎಲ್ಲ ವಿಷಯಗಳಲ್ಲಿಯೂ ಕಲೆಯ ವರ್ಗವನ್ನು ಕಂಡುಹಿಡಿಯುವುದು ರುಚಿಸೂಕ್ಷ್ಮತೆಗೆ ಗುರುತು. ಆದರೆ ಕಾವ್ಯ, ಚಿತ್ರ, ಶಿಲ್ಪ ಮುಂತಾದುವನ್ನು ತುಲನಗೈಯುವಾಗ ಒಂದು ಜಾಗ್ರತೆ ಗಮನಾರ್ಹ. ಒಂದು ಹಕ್ಕಿಯನ್ನು ಕುರಿತ ಕೃತಿ ಕಲಾಕೋವಿದನೊಬ್ಬನಿಂದ ಆಗಿದೆಯೆನ್ನೋಣ; ಅದರ ನೈಪುಣ್ಯಕ್ಕೆ ಎಲ್ಲರೂ ತಲೆತೂಗಬೇಕಾದ್ದೆ; ಆದರೆ ಮಹಾ ಪುರುಷನೊಬ್ಬನ ಅಸಾಧ್ಯ ಚರಿತ್ರೆಯನ್ನು ತೆರೆದು ತೋರಿಸುವ

ಕೃತಿಯೊಡನೆ ಅದನ್ನು ತೂಗಲಾಗದು. ವಸ್ತುವಿನ ಎತ್ತರವನ್ನೂ ವಿಷಯದ ವಿಸ್ತೀರ್ಣವನ್ನೂ ಮರೆಯುವುದು ತಪ್ಪು. ಮಹಾಭಾರತ, ವೇಣೀಸಂಹಾರ, ಭೀಮನ ಮೇಲಣ ಭಾವಗೀತೆ—ಎಲ್ಲವೂ ಕಾವ್ಯ; ಆದರೆ ಒಂದರಿಂದ ಮತ್ತೊಂದಕ್ಕೆ ಎಷ್ಟು ದೂರ! ಒಬ್ಬ ನಾಲ್ಕಾಣೆ ದಾನಮಾಡಿದ; ಮತ್ತೊಬ್ಬ ನಾಲ್ಕು ಸಾವಿರ ರೂಪಾಯಿ: ಇಬ್ಬರ ಕೊಡುಗೈಯಿಗೂ ಒಂದೇ ತೆರದ ಧಾರಾಳ; ಆದರೆ ಕೊಟ್ಟ ದಾನದ ಘನತೆ ಪ್ರಯೋಜನಗಳಲ್ಲಿ ಇರುವ ಭಾರಿ ವ್ಯತ್ಯಾಸವನ್ನು ಯಾರು ಅಳಿಸಬಲ್ಲರು? ಕಲೆಯಲ್ಲಿಯೂ ಹಾಗೆಯೇ. ಆಗ್ರದ ತಾಜ್ ಮಹಲು, ಗಂಜಾಮಿನ ಗುಂಬಸ್, ನಮ್ಮ ಹಳ್ಳಿಯ ಹತ್ತಿರದ ಸೈಯದ್ ಪೀರನ ಗೋರಿ—ಎಲ್ಲವೂ ಸತ್ತವರ ಸ್ಮಾರಕಗಳು; ಆದರೆ ಒಂದರಂತೆ ಇನ್ನೊಂದೆ? ಹಿಮಾಲಯ, ಆಲ್ಪ್ಸ್, ನೀಲಗಿರಿ, ಚಾಮುಂಡಿ, ಸಿದ್ಧಗಂಗೆ ಎಲ್ಲವೂ ಜಾತಿಯಲ್ಲಿ ಬೆಟ್ಟಗಳಾದರೂ ಅವುಗಳ ತಾರತಮ್ಯ ಆನೆ, ಒಂಟೆ, ಹಸು, ಆಡು, ಅಳಿಲುಗಳ ತಾರತಮ್ಯ.

---

೬ ರುಚಿಯ ಪೋಷಣೆ

ಈ ಪರಿಯಲ್ಲಿ ಹರಿತವಾದ ಹದವಾದ ಹರ್ಷಜನಕವಾದ ರುಚಿ ಶುಭ್ರಮನಸ್ಸಿನಿಂದ ಸೂಕ್ತ ಕೃಷಿಗೈದರೆ ಮಾತ್ರ ನಮಗೆ ಕೈವಶ. ಅದಕ್ಕಾಗಿ ನಾವು ಅನುಭವಿಸುವ "ತೊಂದರೆ" ಕಲ್ಲುಕುಟಿಗನ ಕಷ್ಟದಂತಲ್ಲ, ಜೀತದಾಳಿನ ಚಾಕರಿಯಂತಲ್ಲ, ಗುಮಾ

ಸ್ತನ ಬರೆಹದಂತಲ್ಲ, ವರ್ತಕನ ಲೆಕ್ಕಾಚಾರದಂತಲ್ಲ, ಮೋಜು ಗಾರನ ಭೋಗಬೇಟೆಯಂತಲ್ಲ, ತಪಸ್ವಿಯ ಹಠಯೋಗದಂ ತಲ್ಲ. ಅದು ರಸಾಸ್ವಾದ; ಆದ್ದರಿಂದ ನೀರಸವಾಗದಂತೆ ನೋಡಿಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆ. ಬಿಸಿಲಾ ಗಲೀ ಚಳಿಯಾಗಲೀ ಬೇಸರವನ್ನು ಬದಿಗೊತ್ತಿ ದುಡಿಯಲೇ ಬೇಕೆಂಬ ಅವಸರವಿಲ್ಲ. ಸಂತೋಷಕ್ಕಾಗಿ ಸಂತೋಷದಿಂದ ಸಾಗಿಸಬಹುದಾದ್ದೆ ಸರಿಯಾದ ಕಲಾವ್ಯಾಸಂಗ. ಸಂಸ್ಕೃತ ನಾಗಲು ಹವಣಿಸುವವನಿಗೆ ಅದೊಂದು ಕರ್ತವ್ಯ, ಪ್ರೀತಿ ಯಿಂದ ಎಸಗಬಹುದಾದ ಕರ್ತವ್ಯ.

ರುಚಿಶಿಕ್ಷಣಕ್ಕೆ ಎರಡು ಬಗೆಯ ಅನುಕೂಲಗಳು ಆಗತ್ಯ : ಹೊರಗಿನವು, ಒಳಗಿನವು ನಮ್ಮ ಸುತ್ತುಮುತ್ತಲಿನ ಪರಿ ಸ್ಥಿತಿ ಹೊಂದಿಸಿಕೊಡಬೇಕಾದ್ದು ಕೆಲವು ಸಹಕಾರಗಳು; ನಮ್ಮ ನಮ್ಮ ಅಂತಃಕರಣ ಒದಗಿಸಿಕೊಡಬೇಕಾದ್ದು ಕೆಲವು ರೀತಿ ನೀತಿಗಳು.

ಬಾಹ್ಯಸಹಾಯಗಳಲ್ಲಿ ಬಹು ಮುಖ್ಯವಾದುದು ವಿರಾಮ. ಪ್ರತಿಯೊಬ್ಬನಿಗೂ ದಿನವಹಿ ಒಂದೆರಡು ತಾಸಾದರೂ ವಿರಾಮ ಸಿಕ್ಕದಿದ್ದರೆ ಆ ಸಮಾಜ ದೋಷಾವಹ. ಎಲ್ಲರೂ ಬಲ್ಲಂತೆ ಈ ಶತಮಾನಕ್ಕೆ ಯಂತ್ರಯುಗವೆಂದು ಪ್ರಖ್ಯಾತಿ. ಯಂತ್ರ ವೆಂಬುದು ಕೆಲಸ ಕಾಲ ಶಕ್ತಿಗಳನ್ನು ಉಳಿತಾಯಮಾಡುವ ಉಪಕರಣ. ಇದನ್ನು ಪಾಶ್ಚಾತ್ಯರು ಬಹುಬೇಗ ಅರಿತರು. ಅವರ ದೇಶಗಳಲ್ಲಿ ಸಕಲರಿಗೂ ಕೊಂಚಕಾಲ ಬಿಡುವು ಇರು ವಂತೆ ಏರ್ಪಡಿಸಲಾಗಿದೆ. ಆ ವ್ಯವಸ್ಥೆ ಎಷ್ಟು ಅಚ್ಚುಕಟ್ಟಾಗಿದೆ ಯೆಂದರೆ ಅಲ್ಲೆಲ್ಲ ಹಿಂದೆ " ಬದುಕಿಗಾಗಿ ವಿದ್ಯಾಭ್ಯಾಸ " ಎನ್ನುತ್ತಿದ್ದ ಕೂಗು ಈಗ " ವಿರಾಮಕ್ಕಾಗಿ ವಿದ್ಯಾಭ್ಯಾಸ "

ಎಂದು ಮಾರ್ಪಟ್ಟಿದೆ. ೧೯೩೫ ರಲ್ಲಿ ಒಂದು ದೊಡ್ಡ ಸಮ್ಮೇಲನ ಜರುಗಿತು “ ವಿರಾಮದ ಸಮಸ್ಯೆ ” ಯನ್ನು ವಿಚಾರಿಸಲೋಸುಗ. ನಮ್ಮಲ್ಲಿ ಅನೇಕ ಶ್ರಮಜೀವಿಗಳಿಗೆ ಹಿಟ್ಟು ಬಟ್ಟೆ ಸಂಪಾದಿಸುವ ಅವಾಂತರದಿಂದ ತೆರವೇ ಸಿಕ್ಕದಿರುವುದು ಸಂತಾಪಕರ. ಮನುಷ್ಯ ಮನುಷ್ಯನಾಗಬೇಕು; ಶೀತವಲಯದ ಕರಡಿಯಾಗಬಾರದು. ಪಾಪ, ಆ ಪ್ರಾಣಿ ಎಂಟಡಿ ಎತ್ತರ, ಎಂಟುನೂರು ಪೌಂಡು ತೂಕ; ದಿನಕ್ಕೆ ನಾಲ್ಕು ಘಂಟೆ ನಿದ್ರೆಮಾಡಿ ಉಳಿದ ಇಪ್ಪತ್ತು ಘಂಟೆ ಒಂದೇ ಸಮನೆ ಹೊಟ್ಟೆಯನ್ನು ತುಂಬುವುದರಲ್ಲಿಯೇ ನಿರತವಾಗಿರುತ್ತದೆ. ಉದರಭರಣವೇ ಬಾಳಿನ ಸಮಸ್ತ ಉದ್ಯಮವೂ ಆಗಿಬಿಟ್ಟರೆ ಆ ಮನುಜ ತಲೆಯೆತ್ತಲಾರ, ಅವನ ಸಮಾಜ ಮುಂದುವರಿಯಲಾರದು. ಆಫ್ರಿಕದ ಕಾಡುಜನಗಳಲ್ಲಿ ಮದುವೆಯಾದ ಹೆಂಡತಿ ಗಂಡನಿಗೆ ಬಲವಂತಮಾಡಿ ಪುನಃ ಒಬ್ಬಿಬ್ಬರು ಹೆಂಡತಿಯರನ್ನು ಕೊಂಡು ತರುವಂತೆ ಪ್ರೇರಿಸುತ್ತಾಳಂತೆ; ಅವರು ಬಂದರೆ ತನಗೆ ಸಂಸಾರದ ತಾಪತ್ರಯ ಕಡಮೆ, ಸ್ವತಂತ್ರಸಮಯ ಹೆಚ್ಚು.

ವಿರಾಮವನ್ನು ಕಲ್ಪಿಸಿಕೊಳ್ಳುವುದು ಕಷ್ಟವಾದರೆ ಅದನ್ನು ಶ್ಲಾಘ್ಯವಾಗಿ ಉಪಯೋಗಿಸುವುದು ಇನ್ನೂ ಕಷ್ಟ. ವಿವೇಚನೆಯಿಲ್ಲದಿದ್ದರೆ ಪುರುಸೊತ್ತು ಬೇಸರದ ಹೊರೆ; ಇದ್ದರೆ ಅಭ್ಯುದಯಕ್ಕೆ ದಾರಿ. ಅಲ್ಪವೋ ಅಧಿಕವೋ ಇರುವ ಎಲ್ಲ ವಿರಾಮವನ್ನೂ ಆಲಸ್ಯದಲ್ಲಿ ಮುಳುಗಿಸಬಹುದು, ಆಟ ನೋಟಗಳಲ್ಲಿ ಹಾರಿಸಬಹುದು, ದಂಡದ ದುಂದಿನಲ್ಲಿ ದೂಡಬಹುದು, ಕಲಹ ಕಪಟಗಳಲ್ಲಿ ಕೊಲ್ಲಬಹುದು. ಕಾಲ ಹಣಪ್ರಾಯವೆಂದು ಹೊಗಳುತ್ತಾರೆ; ದುಡ್ಡನ್ನು ದುಷ್ಟತನದಲ್ಲಿ ದುರ್ವ್ಯಯ ಮಾಡ

ಬಹುದು, ದೊಡ್ಡ ಕೆಲಸಕ್ಕೆ ಮುಡುಪಾಗಿಡಬಹುದು, ಅಲ್ಲವೆ? ಪ್ರತಿಯೊಬ್ಬನೂ ತನ್ನ ಮಳಿಗೆಯ ಹಿಂದೆ ಒಂದು ಏಕಾಂತದ ಕೊಠಡಿಯನ್ನು ಇಟ್ಟುಕೊಂಡಿರಬೇಕೆಂದು ಮಾಂಟೇನನ ಸಲಹೆ. ವಿಶ್ರಾಂತಿ ಲಭಿಸಿದಕೂಡಲೇ ಕುಪ್ಪಳಿಸಬೇಕು ಅಲ್ಲಿಗೆ, ಕಲೆಯ ಪರಿಚಯಕ್ಕಾಗಿ, ರುಚಿಯ ಪುಷ್ಟಿಗಾಗಿ. ಹಿಂದೆ ಯೂರೋಪಿನಲ್ಲಿ ಶ್ರೀಮಂತನ ಭಾರ್ಯೆ ಸಿಟ್ಟುಬಂದಾಗ ತನ ಗಾಗಿಯೇ ಬೇರ್ಪಡಿಸಿಟ್ಟಿದ್ದ ಒಂದು ಚಿಕ್ಕಮನೆಗೆ ನಡೆದು ಸಿಟ್ಟು ಇಳಿಯುವವರೆಗೂ ಅಲ್ಲಿ ಕುಳಿತುಬಿಡುತ್ತಿದ್ದಳಂತೆ! ನಮಗೆ ಅಂಥಾ "ಮುನಿಸಿನ ಮೂಲೆ" ಬೇಡ; ಸಂಸ್ಕೃತಿಯ ದಿವಾನಖಾನೆ ಬೇಕು. ಅಂದರೆ ನಮ್ಮ ದಿವಸ ದಿವಸದ ಕಷ್ಟ ನಿಷ್ಠುರಗಳ ನಡುವೆ ಹೇಗಾದರೂ ಮಾಡಿ ಕೊಂಚ ಸಮಾ ಧಾನವನ್ನು ಸಂಪಾದಿಸಿಕೊಂಡು, ತೆರವು ಕಾಲವನ್ನು ಕಲಾ ವ್ಯಸನಕ್ಕೆ ಖರ್ಚುಮಾಡುವುದು ನಮ್ಮ ಧರ್ಮ. ತಮಗೆ ಆಗಿ ಬಂದ ಬಹು ವಿರಾಮವನ್ನು ಅತ್ಯುತ್ತಮವಾಗಿ ವಿನಿಯೋಗಿ ಸಿದ ಎರಡು ಘನ ಜನಾಂಗಗಳಲ್ಲಿ ಭರತವರ್ಷದ ಪುರಾತನ ಆರ್ಯರು ಒಬ್ಬರಲ್ಲವೆ? ವೇದ ಉಪನಿಷತ್ತು ತರ್ಕ ವ್ಯಾಕರಣ ಅರ್ಥಶಾಸ್ತ್ರ ವಿಜ್ಞಾನ ಶಿಲ್ಪ ನಾಟಕ ನೃತ್ಯ ಸಾಹಿತ್ಯ ಮುಂತಾದ ಮಹಾಕಾರ್ಯಗಳಲ್ಲಿ ಮೇಲೆನಿಸಿ, ಇಳೆಯ ಮಾದರಿಯಾಗಿ, ಚಿರಾಯುಗಳಲ್ಲವೆ ಅವರು? ವಿರಾಮವನ್ನು ಅಚ್ಚುಕಟ್ಟಾಗಿ ರೂಢಿಸಿಕೊಳ್ಳುವುದರಲ್ಲಿ ಅವರಿಗಿಂತ ಬೇರೆ ಗುರು ಬೇಕೆ ನಮಗೆ?

ಸಮಾಜ ಒದಗಿಸಬೇಕಾದ ಇತರ ಕೆಲವು ಸಲಕರಣೆಗಳಲ್ಲಿ ಉದ್ಯಾನವನ ಸಂಗೀತಮಂದಿರ ಪುಸ್ತಕಭಂಡಾರ ಚಿತ್ರಶಾಲೆ ಕಲಾವಸ್ತುಗಳ ಕೋಶಾಗಾರಗಳು ಮುಖ್ಯ; ಇವು ಎಲ್ಲರ

ಸಲುವಾಗಿ ಎಲ್ಲ ಕಡೆಗಳಲ್ಲಿಯೂ ಸ್ಥಾಪಿತವಾಗಬೇಕು. ಈ ಬಾಬಿಗಾಗಿ ಸರ್ಕಾರ ತಕ್ಕಷ್ಟು ದ್ರವ್ಯವನ್ನು ವ್ಯಯಮಾಡುವುದು ತಪ್ಪಲ್ಲ; ಪ್ರಜೆಗಳು ಕೊಂಚ ಹೆಚ್ಚು ತೆರಿಗೆಯನ್ನು ಕೊಡುವುದೂ ಸರಿಯೆ. ಜನಸೇವೆ ಮಾಡಬೇಕೆಂಬ ವಿಶಾಲ ಹೃದಯದ ಲಕ್ಷ್ಮೀಪುತ್ರರು ಬೇರೆ ಮಾರ್ಗವನ್ನು ಹುಡುಕಬೇಕಾದ್ದಿಲ್ಲ. ಆದರೆ ಇಷ್ಟೇ ಎಂದಿಗೂ ಸಾಲದು. ಹಳ್ಳಿಯ ಒಂದಂಕಣದ ಗುಡಿಸಲಿನಿಂದ ಹಿಡಿದು ದಿಳ್ಳಿಯ ನೂರು ಕೊಠಡಿಯ ಭವ್ಯಭವನದವರೆಗೂ ಯಾವ ಮನೆಯಾದರೂ ಅದು ಮೂಲತಃ ಮನೆ ತಾನೆ. ಅಲ್ಲಿ ಅತಿಥಿದೇವನ ಜಗುಲಿಯಿದೆ; ಪ್ರೇಮದೇವತೆಯ ನಡುಮನೆಯಿದೆ; ಧನಾಧಿಪನ ಕಛೇರಿಯಿದೆ; ಅನ್ನದೈವದ ಕೋಣೆಯಿದೆ; ಮಹಾದೇವನ ಮುಂದಾಸನವಿದೆ. ಆದರೆ ಕಲಾದೇವಿಯ ತೊಟ್ಟಿ ಏಕಿರಬಾರದು? ಶಾರದೆಯ ಪಟವನ್ನು ಅಲ್ಲಲ್ಲಿ ಕಾಣಬಹುದು; ಅಲ್ಲೆಲ್ಲ ಶಾರದೆಯ ಪ್ರಭಾವ ನಿಜವಾಗಿ ಹರಡಿದೆಯೆ? ಅವಳಿಲ್ಲದ ಮನೆ ಹೇಗೆ ತುಂಬಿಕೊಂಡ ಮನೆಯಾದೀತು? ಹತ್ತಾರು ಪುಸ್ತಕ, ನಾಲ್ಕೆಂಟು ಚಿತ್ರ, ಹಲವು ಅಪೂರ್ವ ವಸ್ತುಗಳು—ಹೀಗೆ ಕಲೆಯ ತುಣುಕುಗಳನ್ನ ಸಂಗ್ರಹಿಸುವುದು ಸಾಮಾನ್ಯರಿಗೆ ಅಸಾಧ್ಯವೆ? ಮನೆ ಮಠವಿಲ್ಲದ ಪ್ರತಿಕೂಲದೈವಿಗಳನ್ನು ಬಿಟ್ಟುಬಿಡೋಣ. ಉಳಿದ ನಮ್ಮ ನಾಡಿನ ಪ್ರಜೆಗಳಲ್ಲಿ ಎಷ್ಟು ಮಂದಿ ವರ್ಷ ವರ್ಷವೂ ತಮ್ಮ ವೆಚ್ಚದ ಅಂದಾಜಿನಲ್ಲಿ "ಕಲೆಗಾಗಿ" ಎಂಬ ಅಂಶವನ್ನು ಸೇರಿಸುತ್ತೇವೆ? ಒಂದು ಚಾಟೂಕ್ತಿ ಸರಸವಾಡುತ್ತದೆ: "ಪ್ರತಿದಿನವೂ ಎಂಟು ಘಂಟೆ ಹೆಚ್ಚು ಶ್ರಮವಿಲ್ಲದ ಕೆಲಸಕ್ಕೆ; ಎಂಟು ಘಂಟೆ ಗಾಢ ನಿದ್ರೆಗೆ; ಎಂಟು ಘಂಟೆ ಊಟ ಆಟ ವಿನೋದಗಳಿಗೆ;—

ಮಿಕ್ಕೆಲ್ಲ ಸಮಯವೂ ದೇವರ ಪೂಜೆಗೆ.” ಕಲೆಗೆ ನಾವು ವಿನಾಸ ಲಾಗಿಡುವ ಹಣದ ಮೊತ್ತವೂ ಇಷ್ಟೇ. ಒಬ್ಬ ಕವಿ ಗಾಬರಿ ಪಡುವಂತೆ ಕಲೆಯ ಕುರುಹೇ ಇಲ್ಲದ ಮನೆಯಲ್ಲಿ ಜನಿಸುವ ಶಿಶುವಿನ ಅದೃಷ್ಟ ಅತಿ ಭಯಂಕರವಾದ್ದು! ಬೂಡಸನ್ನು ಕೊಳ್ಳಲು ನಾವು ಹಾತೊರೆಯುತ್ತೇವೆ; ಬುಕ್ಕುಗಳನ್ನು ಕೊಳ್ಳಲು ಏತಕ್ಕೆ ಆತಂಕಪಡುವುದಿಲ್ಲ? ಛತ್ರಿ ಇಲ್ಲದಿದ್ದರೆ ಕಣ್ಣು ಕಣ್ಣು ಬಿಡುತ್ತೇವೆ; ಚಿತ್ರವಿಲ್ಲದಿದ್ದರೆ ಏತಕ್ಕೆ ಕಳವಳಿಸು ವುದಿಲ್ಲ? ಮನಸ್ಸಿದ್ದರೆ ಮಾರ್ಗ; ಹನಿಗೂಡಿದರೆ ಹಳ್ಳ. ಅಂತೂ ಹಲ ಕೆಲವು ಸರಕುಗಳನ್ನು ಸಂಪಾದಿಸಿ ನಮ್ಮ ಸುತ್ತಮುತ್ತ ಹರಡಿಕೊಂಡು ಕಲೆಯ ಆವರಣವನ್ನು ಸೃಜಿಸಿಕೊಳ್ಳುವುದು ಆವಶ್ಯಕ.

ಸನ್ನಿವೇಶ ಉತ್ತೇಜಕವಾಗಿದ್ದರೆ ಸಂತೋಷ; ಕೊನೆಗೆ ಪ್ರತಿಬಂಧಕವಾಗದಿದ್ದರೆ ಸಾಕು. ಏತಕ್ಕೆಂದರೆ ರುಚಿ ಪೋಷಣೆ ಯಲ್ಲಿ ಬಾಹ್ಯ ಸಹಕಾರಕ್ಕಿಂತಲೂ ಆಂತರ್ಯದ ಅಪೇಕ್ಷೆ ಅಧಿಕ. ಪೂರ್ತಿಯಾಗಿ ಆಗದಿದ್ದರೂ ಬಹಳಮಟ್ಟಿಗೆ ಮನುಷ್ಯ ತನ್ನ ಸಮಯ ಸಂದರ್ಭಗಳಮೇಲೆ ಆಧಿಪತ್ಯ ನಡೆಸಲಾಪ. ಸರ್ವಸ್ವಾಮ್ಯವೂ ಮನಸ್ಸಿಗೇ ಸೇರಿದ್ದು ಎಂದು ಕೂಡ ಕೆಲ ದಾರ್ಶನಿಕರು ಘೋಷಿಸಿದ್ದಾರೆ. “ಕಲ್ಲುಗೋಡೆಗಳಿದ್ದ ಮಾತ್ರಕ್ಕೆ ಸೆರೆಮನೆಯಾಗಲಿ”; “ಎಲ್ಲಿಗೆಂದರೆ ಅಲ್ಲಿಗೆ ಚಲಿ ಸುವುದು ಮನಸ್ಸು; ಅದು ಸ್ವರ್ಗವನ್ನು ನರಕವನ್ನಾಗಿಸ ಬಲ್ಲುದು, ನರಕವನ್ನು ಸ್ವರ್ಗವನ್ನಾಗಿಸಬಲ್ಲುದು” ಎಂದು ಕವಿಗಳ ಸಿದ್ಧಾಂತ. ಆದ್ದರಿಂದ ರುಚಿಯನ್ನು ಬೆಳೆಸಿಕೊಳ್ಳಲೂ ಕಾಪಾಡಿಕೊಳ್ಳಲೂ ಕಡೆಯಲ್ಲಿ ಮನುಷ್ಯನೇ ಪ್ರಧಾನಾಧಿಕಾರಿ.

ಶ್ರದ್ಧೆಯನ್ನು ಬಲವಾಗಿ ಹಿಡಿಯಬೇಕು; ಅದು ಪ್ರಥಮ

ನಿಯಮ. ದೃಢಭಾವವನ್ನು ಬಿಡದೆ, ಕುಗ್ಗದ ಆಸಕ್ತಿಯಿಂದ ಕೃಷಿಗೈಯುತ್ತ, ಕ್ರಮವನ್ನು ಅನುಸರಿಸಿ ಮುಂದುವರಿಯುತ್ತ, ನಡೆದುಕೊಳ್ಳುವವನಿಗೆ ಸೌಂದರ್ಯದ ಅನುಗ್ರಹ ಖಂಡಿತ. ಮನುಷ್ಯ ಸ್ವಭಾವತಃ ಸೋಮಾರಿ; ಅವನದು ಸಾಧಾರಣ ವಾಗಿ ಸುತ್ತಲಿನ ಪರಿಸ್ಥಿತಿಯನ್ನು ಒಪ್ಪಿಕೊಂಡುಬಿಡುವ ಚಿತ್ತ ವೃತ್ತಿ. ಹೆಚ್ಚು ತ್ರಾಸವಿಲ್ಲದೆ ಆದಷ್ಟು ಸುಗಮವಾಗಿ ಹೇಗೋ ಹಾಗೆ ಜೀವನ ಸಾಗಿದರೆ ಅಷ್ಟೇ ಸಾಕು ಅವನಿಗೆ; ಅದರ ಕೀಳು ಮೇಲು ಚೆಲುವು ವಿಕಾರ ಅವನನ್ನು ಕಾಡಲಾರವು. “ನರನಿಗೆ ಭೂಮಿಯಮೇಲೆ ಬೇಕಾದುದು ಅಲ್ಪಸ್ವಲ್ಪ; ಅದೂ ಕೂಡ ಹಲ ಕೆಲವು ದಿವಸ ಮಾತ್ರ” ಎಂದು ಒಬ್ಬ ಕವಿಯ ಬೋಧೆ. “ಏನಾದರೇನು? ಎಂತಿದ್ದರೇನು? ಹೇಗೋ ಕಾಲ ವನ್ನು ನೂಕಿ ಕಣ್ಮರೆಯಾದರೆ ಸಾಲದೆ? ಏತಕ್ಕೆ ಆತಂಕ, ಆವೇಶ?” ಎಂಬುದು ಅನೇಕರ ನಂಬಿಕೆ. ಅಭಾವ ವೈರಾಗ್ಯ ಬೇರೆ ಸಿದ್ಧವಾಗಿದೆ ತೂಕಡಿಸುವ ಮನುಷ್ಯನಿಗೆ ಹಾಸಿಗೆ ಹಾಸಿ ಕೊಡುವುದಕ್ಕೆ. ಇದಾವುದೂ ಸ್ವೀಕರಿಸಲು ಅರ್ಹವಲ್ಲ. ಬಾಳು ಹಸನಾಗಬೇಕು, ಮೇಲಕ್ಕೇಳಬೇಕು, ನಾನಾ ಮುಖವಾಗ ಬೇಕು, ಸರ್ವಾಂಗಸುಂದರವಾಗಬೇಕು–ಇದು ಸೃಷ್ಟಿಯ ಕಿರೀಟ ವಾದ ಮಾನವನಿಗೆ ಸಮಂಜಸ ಧ್ಯೇಯ. ಆದ್ದರಿಂದ ತನ್ನ ಮನೆ ನೆರೆಹೊರೆ ಊರು ದೇಶ ಉಲ್ಲಾಸದಿಂದ ವಿರಾಜಿಸು ವಂತೆ ಪ್ರತಿ ಪ್ರಜೆಯೂ ತನ್ನ ಪಾಲಿನ ಕರ್ತವ್ಯವನ್ನು ನೆರ ವೇರಿಸಲು ಸಿದ್ಧವಾಗಿರಬೇಕೆಂಬುದು ಸಮಾಜದ ಹಿತೈಷಿಗಳ ನಿರೀಕ್ಷೆ. ಚೆನ್ನವೊ ಬನ್ನವೊ ಇದ್ದುದರೊಡನೆ ನಿಶ್ಶಂಕೆಯಿಂದ ಹೊಂದಿಕೊಂಡುಬಿಡುವುದು ಭಾಷೆ ಬುದ್ಧಿಗಳಿಂದ ಪ್ರಾಣಿ ವರ್ಗವನ್ನು ಎಂದೋ ಅತಿಕ್ರಮಿಸಿದ ಮನುಷ್ಯನಿಗೆ ಕೇವಲ

ಊನ. ಕೆಲವು ಮಕ್ಕಳು ತಮ್ಮ ತಮ್ಮ ತಾಯಂದಿರನ್ನು ಹೊಗಳಿ ಮಾತನಾಡುತ್ತಿದ್ದುವಂತೆ; "ನಮ್ಮಮ್ಮನಿಗೆ ಎಂಟು ಸೀರೆ ಇದೆ": "ನಮ್ಮ ತಾಯಿ ವಜ್ರದ ಓಲೆ ಹಾಕಿಕೊಳ್ಳು ತ್ತಾಳೆ"; "ನಮ್ಮ ತಾಯಿಯ ಚಿನ್ನದ ಡಾಬು ಎಷ್ಟು ಚೆನ್ನಾ ಗಿದೆಯೊ!" ಇತ್ಯಾದಿ. ಮಕ್ಕಳಿಬ್ಬರು ಅಂದರಂತೆ; "ನಮ್ಮ ಅಮ್ಮನಿಗೆ ಹುಳುಕು ಹಲ್ಲು ಇದೆ!" ಕೆಟ್ಟ ಹಲ್ಲೂ ಒಂದು ಸೊಗಸೆಂದು ಆ ಬಡಮಕ್ಕಳು ಬಗೆದವು. ಎಚ್ಚರಿಕೆಯಿಲ್ಲದಿ ದ್ದರೆ ದೊಡ್ಡವರೂ ಆ ಸ್ಥಿತಿಗೆ ಬೀಳುವುದು ಸಹಜ. ಕೆಲವು ಪಟ್ಟಣಗಳಲ್ಲಿ ಪೆಟ್ರೋಲ್ ಕೊಡುವ ಪಂಪುಗಳಿಗೆ ಹಳದಿಬಣ್ಣ ಹಚ್ಚುತ್ತಿದ್ದರಂತೆ. ಅಲ್ಲಿನ ಪೌರರು ಗಲಭೆಯೆಬ್ಬಿಸಿ ಅವಕ್ಕೆ ಹಸರು ಬಣ್ಣ ಬಳಿಸಿದರಂತೆ. ಅದು ಸರಿ. ಹಳದಿ ಕೆಂಪು ಕಣ್ಣು ಕುಕ್ಕುವ ಬಣ್ಣಗಳು; ಹಸುರು ನೀಲಿ ಕಣ್ಣಿಗೆ ತಂಪಾದ ಬಣ್ಣಗಳು; ಅದರಲ್ಲಿಯೂ ಗಂಡಸಿಗೆ ಬಹು ಪ್ರಿಯವಾದ ಬಣ್ಣ ಹಸುರು. ಇದರಿಂದ ಗೊತ್ತಾಗುವುದೇನೆಂದರೆ ಜನ ತಮಗೆ ಎಷ್ಟು ಲಾವಣ್ಯ ಬೇಕೆಂದು ನಿರ್ಧರಿಸುತ್ತಾರೋ ಅಷ್ಟನ್ನು ಮಾತ್ರ ಪಡೆಯುತ್ತಾರೆ. "ದೇವಾನ್ ದೇವ ಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ". ಶ್ರದ್ಧೆ ಯಿದ್ದರೆ ಯಾವುದಾದರೂ ಶಕ್ಯವೆ. ಪ್ರಾಣಿಗಳಿಂದ ಒಂದೆರಡು ಪಾಠಗಳನ್ನು ಕಲಿಯೋಣ. ದರೋಡೆ ಏಡಿ ಎಂಬ ಒಂದು ಜಾತಿಯ ಏಡಿಯಿದೆ. ತೆಂಗಿನಕಾಯಿನ ಚಿಪ್ಪು ಎಷ್ಟು ಗಟ್ಟಿ ಎಂಬುದನ್ನು ಎಲ್ಲರೂ ಬಲ್ಲರು. ಆ ಸಣ್ಣ ಜಂತು ಅದನ್ನು ಹಿಡಿದುಕೊಂಡು ಕುಕ್ಕಿ ಕುಕ್ಕಿ ಕನ್ನಮಾಡಿ ಒಳಗಿನ ನೀರನ್ನೂ ತಿರುಳನ್ನೂ ಮೆಲ್ಲುತ್ತದೆ! ಕಾಡುಹಂದಿ ನೆಲವನ್ನು ಅಗೆದಿ ರುವ ಚಿಹ್ನೆಯನ್ನು ಅನೇಕರು ನೋಡಿರಬಹುದು. ನೆಲದೊ

ಳಗೆ ಕೆಲವು ಅಡಿಗಳ ಕೆಳಗೆ ಟ್ರಫಲ್ ಎಂಬ ರುಚಿಯಾದ ಗೆಡ್ಡೆ ಬೆಳೆದಿರುತ್ತದೆ, ಅದನ್ನು ತಿನ್ನಲು ಆ ಹಂದಿ ಅಷ್ಟು ಕಷ್ಟ ಪಡುತ್ತದೆ. ನೇತ್ರಾನಂದವೂ ಕರ್ಣರಸಾಯನವೂ ಮನೋಹರವೂ ಆದ ವಸ್ತುಗಳಿಂದ ನಾವಿರುವ ಪ್ರದೇಶವನ್ನು ತುಂಬಿಕೊಳ್ಳಲು ನಾವೇಕೆ ಹೀಗೆ ಪ್ರಯತ್ನ ಪಡಬಾರದು? ೧೯೨೭ರಲ್ಲಿ ಇಂಗ್ಲೆಂಡಿನ ವಿದ್ಯಾಭ್ಯಾಸ ಸಮ್ಮೇಲನದಲ್ಲಿ ಭಾಷಣಮಾಡುತ್ತ ಯೂಸ್ಟೇಸ್ ಪರ್ಸಿ ಹೇಳಿದ: “ಓದುವ ಅಭ್ಯಾಸವನ್ನು ನಾವು ಈಗ ಉಂಟುಮಾಡಬೇಕಾಗಿಲ್ಲ, ಪ್ರಚೋದಿಸಬೇಕಾಗಿಲ್ಲ. ನಮ್ಮ ದೇಶದಲ್ಲಿ ಹೆಚ್ಚು ಕಡಮೆ ಪ್ರತಿಯೊಬ್ಬನಿಗೂ ಆ ಅಭ್ಯಾಸ ಇದೆ, ಬಹು ತೀವ್ರವಾಗಿ ಇದೆ.” ನಮ್ಮ ನಾಡನ್ನು ಕುರಿತು ಯಾವಾಗ ನಾವು ಈ ವಾಕ್ಯವನ್ನು ಧೈರ್ಯದಿಂದ ಉಚ್ಚರಿಸಬಹುದೋ ಪರಬ್ರಹ್ಮ ಬಲ್ಲ. ಅಲ್ಲಿ ಹನ್ನೆರಡರಿಂದ ಹದಿನಾರರವರೆಗಿನ ವಿದ್ಯಾರ್ಥಿಗಳು ಶಾಲೆಯ ಪಾಠಪ್ರವಚನಗಳ ಜೊತೆಗೆ ಯಾರ ಬಲಾತ್ಕಾರವೂ ಇಲ್ಲದೆ ತಿಂಗಳಿಗೆ ಐದು (ಬಾಲಕರು), ಆರು (ಬಾಲಕಿಯರು) ಪುಸ್ತಕಗಳನ್ನು ತಾವೇ ಇಷ್ಟಪಟ್ಟು ಓದುತ್ತಾರಂತೆ! ಈ ತೆರದ ಅಭಿಲಾಷೆ ಜನದ ಚಿತ್ತದಲ್ಲಿ ಮೂಡಬೇಕು. ಅದನ್ನು ತೀರಿಸಿಕೊಳ್ಳಲು ಪ್ರಾಮಾಣಿಕತೆಯಿಂದ ಅವರು ಕೆಲಸಮಾಡಬೇಕು ಈ ಶ್ರದ್ಧೆ ರುಚಿಯ ಬೆಳೆವಣಿಗೆಗೆ, ಅಷ್ಟೇಕೆ ಮನುಷ್ಯನ ಅಭ್ಯುದಯಕ್ಕೆ, ನೆಲೆಗಟ್ಟು.

ಆಮೇಲೆ ಧಾರಾಳ ಬುದ್ಧಿಯನ್ನು ಗಳಿಸುವುದು ಅಗತ್ಯ. ಅಸಹನೆ ಪಕ್ಷಪಾತ ಆವೇಶವೆಲ್ಲವನ್ನೂ ಹೊರಗೆಸೆದು, ಹೃದಯವನ್ನು ಶುಚಿಗೈದು, ಮನಸ್ಸನ್ನು ವಿಶಾಲಗೊಳಿಸದಿದ್ದರೆ, ಅನರ್ಥ. ಕಲಾಪ್ರಪಂಚ ಪ್ರಪಂಚದ ಹಾಗೆಯೇ ಬಹು ವಿಸ್ತಾರ. ನಮಗೆ ಒಪ್ಪಾದ ಚಿತ್ರವೊಂದೇ ಚಿತ್ರಸರ್ವಸ್ವವಲ್ಲ;

ನಮ್ಮ ಮೆಚ್ಚಿನ ಕವಿ ಇಡೀ ಕಾವ್ಯಲೋಕವಲ್ಲ; ನಾವು ಪೂಜಿಸುವ ಗುಡಿ ಸಾವಿರಾರು ಗುಡಿಗಳಲ್ಲಿ ಒಂದು. ಚೆಲುವು ಯಾವ ಕಡೆಯಿಂದ ಬೇಕಾದರೂ ಹಾದು ಬರಲಿ, ಅದನ್ನು ಸ್ವೀಕರಿಸಲು ಉತ್ಸುಕತೆ ಇರುವುದೇ ರಸಶೀಲ. ಚಿತ್ತಸಂಕೋಚ ಕಲಾಭ್ಯಾಸಕ್ಕೆ ದೊಡ್ಡ ಅಡ್ಡಿ. ಈ ವಿಚಾರದಲ್ಲಿ ಪಶುವಿಗಿಂತ ಮನುಷ್ಯ ಎಷ್ಟೋ ಮೇಲು ಎಂಬುದನ್ನು ಪ್ರಾಮಾಣಿಸದಿದ್ದರೆ ಮನುಷ್ಯ ಪಶುವಿಗಿಂತ ಅತಿ ಕೀಳು. ಜೇಡ ತನ್ನ ಬಲೆಯಲ್ಲಿ ನೊಣ ಸಿಕ್ಕಿಕೊಂಡ ಕೂಡಲೇ ಅದರ ಬಳಿಗೆ ಓಡಿ ಹೋಗುತ್ತದೆ. ಆದರೆ ನೆಲದ ಮೇಲೆ ಕಣ್ಣು ಮುಂದೆ ನೊಣ ಹರಿದಾಡುತ್ತಿದ್ದರೆ ಅದನ್ನು ತನ್ನ ಆಹಾರವೆಂದು ಅರಿಯುವುದೇ ಇಲ್ಲ. ಆಕ್ಟೊಪಸ್ ಕ್ರಿಮಿಗೆ ದೃಷ್ಟಿಪಾಟವ ಬಹಳ ಚೆನ್ನಾಗಿದೆ; ನೆಲದ ಮೇಲೆ ಏಡಿಯನ್ನು ಕಂಡೊಡನೆ ಅದರ ಮೇಲೆ ಎರಗಿ ಅದನ್ನು ತಿಂದುಬಿಡುವುದು. ಏಡಿಯನ್ನು ದಾರಕ್ಕೆ ನೇತುಹಾಕಿ ಆಕ್ಟೊಪಸ್‌ನ ಮುಂದೆ ಅಲುಗಾಡಿಸಿದರೆ ಅದು ತಟಸ್ಥವಾಗಿರುತ್ತದೆ. ಹಕ್ಕಿಗಳೂ ಅಂತೆಯೇ. ಮರಿಗಳಿರುವ ಗೂಡನ್ನು ಸ್ವಲ್ಪ ಆಚೆಗೆ ಬದಲಾಯಿಸಿ ಇಟ್ಟರೆ ತಾಯಿ ತಂದೆ ಬಂದು ಮೊದಲಿದ್ದ ಸ್ಥಳವನ್ನು ಈಕ್ಷಿಸಿ, ಅದು ಬದಲಾದುದನ್ನು ಕಂಡು ಬೆಚ್ಚಿ, ಅಲ್ಲೇ ಸುತ್ತಾಡಿ, ಕಡೆಗೆ ಬೇರೊಂದು ಗೂಡನ್ನು ಕಟ್ಟಲು ಪ್ರಾರಂಭಿಸುತ್ತವೆ; ಆ ಜಾಗದಿಂದ ಸ್ಪಷ್ಟವಾಗಿ ಕಾಣಿಸುತ್ತಿದರೂ ಕೂಡ ತಾವು ಕಟ್ಟಿದ ಮೊದಲಿನ ಗೂಡನ್ನು ಅವು ಗುರ್ತಿಸಲಾರವು. ಈ ವಿಧದ ದೃಷ್ಟಿಮಾಂದ್ಯ ಮಾನವನಿಗೆ ಅವಮಾನ. ಎಲ್ಲಿ ಹಿತವಾದ ವಸ್ತು ಕಾಣುತ್ತದೆಯೋ ಅಲ್ಲಿ ಅದನ್ನು ಮೆಚ್ಚುವವೈಶಾಲ್ಯ ಅವನಿಗೆ ಗೌರವ. ಪರಿಸ್ಥಿತಿ ಬದಲಾಯಿಸಿದರೆ ವಸ್ತುವಿನ ಸತ್ವ ಬೇರೆಯಾಯ್ತೆ?

ಸೂಕ್ತರಸಾನುಭವಕ್ಕೆ ಅಡಚಣೆಯಾಗುವ ಚಿತ್ತವೃತ್ತಿ ನಾಲ್ಕೈದು ಬಗೆಯೆಂದು ಭಾವಿಸಬಹುದು. (೧) ಕಲೆ ಪ್ರಸ್ತಾಪಿಸುವ ವಿಷಯುವನ್ನು ತನಗೆ, ತನ್ನ ಜೀವನಕ್ಕೆ ಅನ್ವಯಮಾಡಿಕೊಳ್ಳುವ ಜಾಯಮಾನ ಮೊದಲನೆಯದು. ಪ್ರಬಂಧದಲ್ಲಿ ಬೆಟ್ಟವನ್ನು ಬಣ್ಣಿಸಿದ್ದರೆ, "ಆ ಬೆಟ್ಟವನ್ನು ಹತ್ತಿ ಸುತ್ತಲಿನ ದೃಶ್ಯವನ್ನು ನಾನು ನೋಡಬೇಕು; ಕವಿಯ ಮಾತುಗಾರಿಕೆ ಆ ಆಸೆಯನ್ನು ನನ್ನಲ್ಲಿ ಹುಟ್ಟಿಸುತ್ತವೆ" ಎನ್ನುವುದು; ತಾಯಿ-ಮಗುವಿನ ಶಿಲ್ಪವನ್ನು ನೋಡಿ, "ಇವಳಿಗೆ ಆ ಮಗುವನ್ನು ಮುದ್ದಿಡುವುದಕ್ಕೆ ಬಾರದು; ನನಗೆ ಆ ಮಗು ಇದ್ದಿದ್ದರೆ ತೋರಿಸುತ್ತಿದ್ದೆ!" ಎನ್ನುವುದು; ಸಂಗೀತವನ್ನು ಕೇಳಿ, "ಈ ಹಾಡು ನನ್ನ ಈಗಿನ ಮಾನಸಿಕ ಸ್ಥಿತಿಯಲ್ಲಿ ನನಗೆ ಹಿಡಿಯದು;" ಎನ್ನುವುದು: ಈ ರೀತಿ ಟಿಪ್ಪಣಿ ಹೇಳುವವರಿಗೆ ತಮ್ಮಲ್ಲಿ ಉಂಟಾಗುವ ಭಾವ ಭಾವನೆಗಳು ಹೆಚ್ಚೇ ಹೊರತು ಕಲೆ ಪ್ರದರ್ಶಿಸುವ ಕೌಶಲವಾಗಲಿ ಅರ್ಥವಾಗಲಿ ವಿಚಾರಾರ್ಹವಲ್ಲ. (೨) ಅಪ್ರಕೃತವೂ ಅಮುಖ್ಯವೂ ಆದ ಸಂಗತಿಗಳಿಗೆ ಮನಸೋಲುವುದು ಎರಡನೇ ಬಗೆಯ ಅಡ್ಡಿ. ಒಬ್ಬ ಕಾವ್ಯಪ್ರಿಯ ತೋರುದತ್ತಳ ಶ್ಲಾಘನೆಯನ್ನು ಕೇಳಿ ಅವಳ ಕವಿತೆಗಳನ್ನು ಓದುವುದಕ್ಕೆ ಆರಂಭಿಸಿದ. ಸುಮಾರು ಇಪ್ಪತ್ತು ಪುಟವನ್ನು ಓದಿದಾಗ ಯಾರೋ ಆತನಿಗೆ ತೋರುದತ್ತಳು ಹಿಂದುವಾಗಿದ್ದು ಆಮೇಲೆ ಕ್ರಿಶ್ಚಿಯನ್ ಆದಳು ಎಂದು ನಿರೂಪಿಸಿದರಂತೆ. ಕೂಡಲೇ ಅಸಹ್ಯದಿಂದ ಅವಳ ಪುಸ್ತಕವನ್ನು ಎಸೆದುಬಿಟ್ಟು ಈವರೆಗೂ ಅದನ್ನು ಆತ ಓದಿಲ್ಲವಂತೆ! ಬುದ್ಧನ ಮೇಲಣ ಒಂದು ಕಾವ್ಯವನ್ನು ವಿಮರ್ಶೆಮಾಡುತ್ತ, "ಇಲ್ಲಿ ನೋಡಿ. ಗೌತಮನಿಗೆ ಅನೇಕ ಜನ ಹೆಂಡಿರು ಎಂದು ಬರೆ

ದಿದೆ; ಈ ಕಾವ್ಯ ಚೆನ್ನಾಗಿಲ್ಲ. ಅದೇ ಇನ್ನೊಂದು ಕಾವ್ಯವನ್ನು ನೋಡಿ: ಅಲ್ಲಿ ಯಶೋಧರೆ ಒಬ್ಬಳೇ ಅವನಿಗೆ ಪತ್ನಿ ಎಂದಿದೆ; ಆ ಕಾವ್ಯ ಎಷ್ಟು ಚೆನ್ನಾಗಿದೆ!" ಎಂದು ಒಬ್ಬರು ಟೀಕಿಸಿದರಂತೆ. ಹೊಗಾರ್ತನ "ಮದುವೆಯ ನಿಶ್ಚಿತಾರ್ಥ" ಎಂಬ ಚಿತ್ರದ ಮೇಲೆ ಒಬ್ಬ ಬಾಲಕನ ವ್ಯಾಖ್ಯಾನ: "ಇದರಲ್ಲಿ ಮದುವೆಯನ್ನು ಚಿತ್ರಿಸಿದೆ. ಮದುವೆ ಮೊದಲಲ್ಲಿ ಸಂತಸಕರ; ಆದರೆ ಬರುತ್ತಬರುತ್ತ ಅದರಿಂದ ವಿಪರೀತ ಕಷ್ಟವುಂಟು." "ಅಗಸಗಿತ್ತಿ" ಎಂಬ ಚಿತ್ರವನ್ನು ನೋಡಿ ಇನ್ನೊಬ್ಬ ಬಾಲಕ ಬರೆದ: "ಎಷ್ಟೋ ಮಂದಿಗೆ ಕೆಲಸಗಾರರ ಬದುಕು ಎಷ್ಟು ಕಠಿಣವೆಂಬುದು ಗೊತ್ತೇ ಇಲ್ಲ." (೩)ಕೇವಲ ಅಸಂಬದ್ಧವಾದ ವಿದ್ಯಮಾನಗಳಿಗೆ ಮನಸ್ಸನ್ನು ತೆತ್ತುಬಿಡುವುದು ಅನೇಕ ವೇಳೆ ರಸಾನುಭವಕ್ಕೆ ಪ್ರಬಲವಿಘ್ನ. ಒಂದು ಚಿತ್ರದ ಹೆಸರು "ಗುರುವಾರ"; ಅದರಲ್ಲಿ ಕೆಲವು ಕ್ರೈಸ್ತ ಯತಿಗಳು ಶುಕ್ರವಾರದ ಊಟಕ್ಕೆ ಬೇಕಾದ ಮೀನನ್ನು ಹಿಡಿಯುತ್ತಿದ್ದಾರೆ. (ಅವರಿಗೆ ಶುಕ್ರವಾರ ಬೇರೆ ಮಾಂಸವನ್ನು ತಿನ್ನಕೂಡದೆಂಬ ನೇಮ) ಒಬ್ಬಳು ಆ ಚಿತ್ರವನ್ನು ನೋಡಿ, ತನಗೆ ಹಿಂದಿನ ಗುರುವಾರ ಆದ ಒಂದು ಘಟನೆಯನ್ನು ಜ್ಞಾಪಿಸಿಕೊಂಡು ಅದು ಹಿತಕರವಾಗಿದ್ದುದರಿಂದ ಚಿತ್ರವನ್ನು ಬಾಯಿತುಂಬ ಹೊಗಳಿದಳಂತೆ. ಹೊಳೆಯುವ ನೀಲಿಯನ್ನೂ ಮಾಸಿದ ಹಸುರನ್ನೂ ಮುಂದಿಟ್ಟು, "ಇವಲ್ಲಿ ನಿನಗೆ ಯಾವುದು ಇಷ್ಟ?" ಎಂದಾಗ, ಒಬ್ಬಳು "ಹಸುರು" ಎಂದಳಂತೆ; ಏತಕ್ಕೆಂದರೆ ಅವಳಿಗೆ ಋತುಗಳಲ್ಲಿ ಶರತ್ಕಾಲ ಶ್ರೇಷ್ಠ; ಆಗ ಪ್ರಕೃತಿಯಲ್ಲಿ ಎಲ್ಲೆಲ್ಲಿಯೂ ಮಾಸಲು ಹಸುರು—ತಿಳಿಹಳದಿಯ ಸ್ವರಾಜ್ಯ. ಇನ್ನೊಬ್ಬಳು, ಯಾವುದೋ ಎರಡು, ("ಕ" "ಗ" ಎಂದು

ಕರೆಯೋಣ,) ಬಣ್ಣಗಳನ್ನು ಮುಂದೆ ಹಿಡಿದಾಗ, ಮೊದಲು "ಕ" ವನ್ನು ಬಯಸಿದಳಂತೆ, ಅದು ಒಂದು ಪದ್ಮ ಪುಷ್ಪ ವನ್ನು ನೆನಪಿಗೆ ತಂದದ್ದರಿಂದ. ಆಮೇಲೆ ಆ ರೀತಿಯಲ್ಲಿ ತೀರ್ಪನ್ನೀಯುವುದು ನಿರಂಕುಶ ವರ್ತನೆಯೆಂದು ಬಗೆದು, ಆವೆರಡರಲ್ಲಿ ರವಿಕೆ ಹೊಲಿಸಿದರೆ ತನಗೆ ಯಾವುದು ಒಪ್ಪುತ್ತೆ ಎಂಬ ಸೂತ್ರವನ್ನಿಟ್ಟುಕೊಂಡು ಆ ಬಣ್ಣಗಳನ್ನು ಹೋಲಿಸಿ, "ಕ" ವನ್ನು ತಿರಸ್ಕರಿಸಿ "ಗ" ವನ್ನು ಇಚ್ಛಿಸಿದಳಂತೆ ಆಕೆ. ತೊಗರಿಬೇಳೆ ಹಸನೋ ಕಳಪೆಯೋ ಎಂದು ಗುಣಿಸುವಾಗ ಅದನ್ನು ಬೆಳೆದ ಊರಿನ ಪಟೇಲನಿಗೆ ಏಳು ಮಕ್ಕಳು ಎಂಬ ಸಂಗತಿಯನ್ನು ಗುಣಿಸುವುದು ಯಾವ ನ್ಯಾಯ? (೪) ಕಲೆ ಪ್ರದರ್ಶಿಸುವ ಪದಾರ್ಥಕ್ಕೆ ಇಲ್ಲದ ಸಲ್ಲದ ಭಾವನೆಗಳನ್ನು ಆರೋಪಿಸುವುದು ಮತ್ತೊಂದು ವಿಕಾರ. ಕಲ್ಲಿನ ಬಸವನನ್ನು ಕಂಡು "ಇದು ವಿಶೇಷ ಅಹಂಕಾರದಿಂದ ಮದಿಸಿದೆ!" ಎಂದೂ, ಕುಸುಮಗಳ ಮೇಲಣ ಕವನವನ್ನು ಓದಿ "ಈ ಹೂಗಳು ಎಷ್ಟು ಉಲ್ಲಾಸದಿಂದ ತಲೆಯನ್ನು ಕೊಡಹುತ್ತಿವೆ!" ಎಂದೂ, ಸಮುದ್ರದ ಚಿತ್ರವನ್ನು ನೋಡಿ "ಈ ಅಲೆಗಳು ಏನನ್ನೋ ಬಾಚಿಕೊಳ್ಳಬೇಕೆಂದು ಮೇಲುಮೇಲಕ್ಕೆ ಏರು ತ್ತಿವೆ!" ಎಂದೂ ನಿಶ್ಚಯಿಸಿ ಕಲಾಪರೀಕ್ಷೆಯನ್ನು ಮುಗಿಸಿ ಬಿಡು ವುದು ನಿಜವಾದ ಗುಣಜ್ಞತೆಗೆ ಬಹು ದೂರ. (೫) ಕುಲ ಮತ ಗ್ರಾಮ ದೇಶ ಮುಂತಾದ ವ್ಯಾಮೋಹಗಳಿಂದ ಹುಟ್ಟುವ ಪಕ್ಷಪಾತ ಕಡೆಯ ವಕ್ರತೆ. ಇದಕ್ಕೆ ನಿದರ್ಶನ ಹೇರಳ. ನಮ್ಮಲ್ಲಿ ಜೈನರು ಜೈನ ಕವಿಗಳನ್ನೇ ವೀರಶೈವರು ವೀರಶೈವ ಕವಿಗಳನ್ನೇ ಬ್ರಾಹ್ಮಣರು ಬ್ರಾಹ್ಮಣ ಕವಿಗಳನ್ನೇ ಪಠಿಸಿ, ಮೆಚ್ಚಿ, ಪ್ರಶಂಸಿಸುವುದು ಹಿಂದೆ ಹೆಗ್ಗುರವದ ಪದ್ಧತಿಯಾಗಿರ

ಲಿಲ್ಲವೆ? ಅದು ಈಗ ಪೂರ್ತಿಯಾಗಿ ನಾಶವಾಗಿದೆಯೆಂದು ನಂಬೋಣವೆ? ನಮಗೆ ಬೇಕಾದವನು ಕಟ್ಟಿದನೆಂದು ಅವನ ಕೃತಿಗೆ ಅತಿಶಯೋಕ್ತಿಯ ಕಾಣಿಕೆಯನ್ನು ಅರ್ಪಿಸುವುದು, ನಮಗೆ ಬೇಡದವನು ಕಟ್ಟಿದನೆಂದು ಅವನ ಕೃತಿಗೆ ಅವಹೇಳನದ ಬೆರಳನ್ನು ತೋರಿಸುವುದು; ಅಬಲೆಯೊಬ್ಬಳು ರಚಿಸಿದ್ದಾಳೆಂದು ಹೃದಯವನ್ನು ಬೆಣ್ಣೆಗಿಂತ ಮೃದುಮಾಡಿಕೊಳ್ಳುವುದು, ಅನ್ಯ ದೇಶದವನು ರಚಿಸಿದ್ದಾನೆಂದು ಹೃದಯವನ್ನು ಕಬ್ಬಿಣಕ್ಕಿಂತ ಕಠಿಣಮಾಡಿಕೊಳ್ಳುವುದು; ಇಂದಿನ ಕವಿ ಲಿಖಿಸಿದ್ದೆಂದು ಗಂಟಲು ನೋಯುವವರೆಗೂ ಕೂಗಿ ಹೆಚ್ಚಿಸುವುದು, ಹಿಂದಣ ಕವಿ ಲಿಖಿಸಿದ್ದೆಂದು ಮೂಗನ್ನೆತ್ತಿ ಉಪೇಕ್ಷಿಸಿ ಕಡ್ಡಿಗಿಂತ ಕಡಮೆಗೈಯುವುದು—ಇವೆಲ್ಲ ಸ್ವಾರಸ್ಯಾನುಭವಕ್ಕೆ ತೊಡಕು, ತೊಂದರೆ. ಹ್ಯಾಸ್ಲಿಟ್ ಹೇಳಿದ ಒಂದು ಕಥೆ ಇಲ್ಲಿ ಸ್ಮರಣೆಗೆ ಯೋಗ್ಯ. ಒಬ್ಬ ಫ್ರೆಂಚ್ ಉಪಾಧ್ಯಾಯನೊಡನೆ ಅವನು ರಾಸೀನನ ನಾಟಕಗಳನ್ನು ಓದುತ್ತಿದ್ದಾಗ, ರಸವತ್ತಾದ ಭಾಗ ವಾವುದಾದರೂ ಬಂದಕೂಡಲೇ ಆ ಉಪಾಧ್ಯಾಯ ಓದುವುದನ್ನು ನಿಲ್ಲಿಸಿ, ಮೇಜನ್ನು ಬಡಿದು, ವಿದ್ಯಾರ್ಥಿಯನ್ನು ಕುರಿತು ಕೇಳುತ್ತಿದ್ದನಂತೆ: “ಎಲ್ಲಿ ಹೇಳು, ಇದಕ್ಕೆ ಜೋಡಿಯಾದ್ದು ನಿಮ್ಮ ಷೇಕ್ಸ್‌ಪಿಯರಲ್ಲಿ ಯಾವುದು ಇದೆ?” ನಿಷ್ಕಾರಣವಾದ ಜ್ಞಾಪಕ ಮರೆವು, ಅಸಮಂಜಸವಾದ ಆದರ ಅನಾದರ, ಅನ್ಯಾಯದ ವಾಂಛಿಲ್ಯ ವೈರತ್ವವೆಲ್ಲವನ್ನೂ ತೊಡೆದು ಹಾಕಿ ರುಚಿಯನ್ನು ಶುಚಿಗೈಯುವುದು ಅತ್ಯಾವಶ್ಯಕ. ಭಗವಂತನ ಕೃಪೆಯಿಂದ ನಮಗೆ ಗಭೀರವಾದ ಕಲಾಪ್ರಪಂಚವೂ ಗಂಭೀರವಾದ ಮನಸ್ಸೂ ದೊರೆತಿರುವಾಗ, ಸ್ವಚ್ಛಂದವಾಗಿ ಓಡಾಡಿ ರಸಪಾನ ಮಾಡಿ ತೃಪ್ತಿಹೊಂದದೆ, ಬೇಲಿ ತೆರೆ

ಗೋಡೆಗಳನ್ನು ಎಬ್ಬಿಸಿಕೊಂಡು ನಾವೇಕೆ ಸಂಕಟದ ಕಿಷ್ಕಿಂಧೆಯಲ್ಲಿ ಒದ್ದಾಡಬೇಕು ?

ಕಡೆಯಮಾತಾಗಿ, ಗೊತ್ತಾದ ಒಂದು ಕ್ರಮವನ್ನು ಹಿಡಿದು ವ್ಯಾಸಂಗ ನಡೆಸುವುದು ಯುಕ್ತವೂ ಪ್ರಯೋಜನಯುಕ್ತವೂ ಆಗಿದೆಯೆನ್ನಬಹುದು. ಈ ವಿಚಾರವನ್ನು ಕುರಿತು ಸಲಹೆ ಕೊಟ್ಟಿರುವ ವಿದ್ವಾಂಸರಲ್ಲಿ ಎರಡು ಗುಂಪು : ಲ್ಯಾಮ್ ಪಂಥ· ಹ್ಯಾರಿಸನ್ ಪಂಥ. ಚಾರ್ಲ್ಸ್ ಲ್ಯಾಮ್ ತನ್ನ ಸೋದರಿಯ ವಿದ್ಯಾಭ್ಯಾಸವನ್ನು ಪ್ರಸ್ತಾಪಿಸುವಾಗ, ಅವಳು ದೈವವಶಾತ್ತು ಒಂದು ವಾಙ್ಮಯರಾಶಿಯ ಮಧ್ಯಕ್ಕೆ ಉರುಳಿ ಬಿದ್ದ ಹಾಗೂ, ಅಲ್ಲಿ ಯಾರೊಬ್ಬರ ಮೇಲ್ವಿಚಾರಣೆಗೂ ಬಲಾತ್ಕಾರಕ್ಕೂ ಸಿಕ್ಕದೆ, ಸ್ವತಂತ್ರವಾಗಿ ಸುಳಿದಾಡಿ, ಮನಸ್ಸಿಗೆ ಹಿಡಿಸಿದ ಗ್ರಂಥವನ್ನು ಮನನಮಾಡಿ, ನಿಸ್ಸಾರವೆಂದು ತೋರಿದ್ದನ್ನು ನಿರಾಕರಿಸಿ, ತನ್ನ ರುಚಿಯನ್ನು ವೃದ್ಧಿಪಡಿಸಿಕೊಂಡಳೆಂದೂ ಹರ್ಷದಿಂದ ವಿವರಿಸಿದ್ದಾನೆ. ಅಲ್ಲದೆ ತನಗೆ ಇಪ್ಪತ್ತು ಕುವರಿಯರಿದ್ದ ಪಕ್ಷದಲ್ಲಿ ಅವರೆಲ್ಲರಿಗೂ ಅದೇ ಸ್ವತಂತ್ರ ಸಂಪ್ರದಾಯದ ವಿದ್ಯಾಭ್ಯಾಸವನ್ನು ಕೊಡುತ್ತಿದ್ದೆನೆಂದು ಷಡ್ಡು ಹೊಡೆದು ಅಬ್ಬರಿಸಿದ್ದಾನೆ. ಲ್ಯಾಮನ ನಾಯಕತ್ವಕ್ಕೆ ನಾವು ತಲೆಬಾಗಿದರೆ ರುಚಿಯ ಸಾಗುವಳಿಗೆ ಘಳಿಗೆ ನಿಯಮ ಸಿಸ್ತು ಸಂಕೇತವಾವುದೂ ಇರಬಾರದು. ಕೈಗೆ ಸಿಕ್ಕಿದ ಸಾಹಿತ್ಯವನ್ನು ಪಠಿಸಲಿ ; ಕಿವಿಗೆ ಲಭಿಸಿದ ಸಂಗೀತವನ್ನು ಆಲಿಸಲಿ ; ಕಣ್ಣಿಗೆ ಬಿದ್ದ ಮಂದಿರವನ್ನು ಈಕ್ಷಿಸಲಿ ; ರುಚಿ ಬೆಳೆದೇ ಬೆಳೆಯುತ್ತದೆ. ಈ ಉದಾಸೀನ ತತ್ತ್ವವನ್ನು ಅನುಮೋದಿಸಲಾಗುವುದಿಲ್ಲ. ಯಾವ ಕಟ್ಟುಪಾಡನ್ನೂ ಗಮನಿಸದೆ, ಯಾವ ಹೆದ್ದಾರಿಯನ್ನೂ ಅನುಸರಿಸದೆ, ಕಲೆಯ ಗುಟ್ಟನ್ನು ಅರಿಯತ್ತೇವೆಂದರೆ ಅದು

ಸಲ್ಲದು. ಈಗ ನೋಡೋಣ: ಟೆನ್ನಿಸ್ ಆಟವಿದೆ; ಒಂದು ದಾಂಡು, ಒಂದು ಚಂಡು, ಒಂದು ಕಣ--ಇಷ್ಟಿದ್ದರೆ ಸಾಲದೆ? ಕಣಕ್ಕೆ ಹೋಗಿ ಹೀಗೋ ಹಾಗೋ ಹೇಗೋ ಕೈಯನ್ನು ತಿರುಗಿಸುತ್ತಿದ್ದರೆ ಮುಂದೆ ಟೆನ್ನಿಸ್ ಆಟದಲ್ಲಿ ಬೆಳ್ಳಿಯ ಬಟ್ಟಲಿನ ಬಹುಮಾನ ಬಂದೇ ಬರುತ್ತೆ ಎಂದು ವಾದಿಸಬಹುದೆ? ಆ ರೀತಿ ಕಲಿತ ಆಟವನ್ನು ಟೆನ್ನಿಸ್ ಎಂದು ಆಟಗಾರರು ಕರೆಯಲೊಪ್ಪುವರೆ? ಇಲ್ಲ; ಅದರಲ್ಲಿ ನುರಿತವರ ಸಮ್ಮುಖದಲ್ಲಿ, ಅವರ ಬುದ್ಧಿವಾದದಂತೆ, ಎಡೆಬಿಡದೆ ಅಭ್ಯಾಸ ಮಾಡಬೇಕು; ಅವರು ಆಡುವಾಗ ಚಾಕಚಕ್ಯವನ್ನು ಲಕ್ಷಿಸಿ ಪಾಠ ಕಲಿಯಬೇಕು; ಇಲ್ಲದಿದ್ದರೆ ಅಷ್ಟಕ್ಕಷ್ಟೆ. ನಿಜಾಂಶ ಹೀಗಿರುವಾಗ, ಲಲಿತಕಲೆ ವಿನೋದಕ್ರೀಡೆಗಿಂತ ಕೀಳಾಯ್ತೆ? ಲೋಕದ ಆಕಾರ ಸತ್ವ, ಜೀವನದ ಸಾರ ಆನಂದ, ಎಲ್ಲವನ್ನೂ ಸ್ವಲ್ಪದರಲ್ಲಿ ರೂಪಿಸುವ ಕಾವ್ಯ, ಶಿಲ್ಪ, ಚಿತ್ರ, ಸಂಗೀತವನ್ನು ಚಿಟಕಿ ಚಪ್ಪರದಲ್ಲಿ ಗ್ರಹಿಸಲು ಸಾಧ್ಯವೆ? ಆದ್ದರಿಂದ ಲ್ಯಾಮುನ ಅಭಿಮತ ಒಂದು ಬಗೆಯ ವಿಪರೀತ. ಫ್ರೆಡರಿಕ್ ಹ್ಯಾರಿಸನ್ನನ ಅಭಿಮತ ಅದಕ್ಕೆ ವಿರೋಧವಾದ ವಿಪರೀತ. ಅವನು ವಿಧಿಸುವುದು ಗುರುಕುಲ ವಾಸದಂಥಾ ಉಗ್ರವ್ರತ. "ಏನನ್ನು ಓದಬೇಕೆಂಬ ಉದ್ದೇಶವಿಲ್ಲದೆ ನೀನು ಒಂದು ಪುಸ್ತಕವನ್ನು ಕೈಗೆ ತೆಗೆದುಕೊಂಡರೆ ಉದ್ದೇಶಪಟ್ಟು ಓದಬಹುದಾದ ಒಂದು ಸದವಕಾಶವನ್ನು ನೀಗಿಕೊಂಡೆ. ಕಳಪೆಯಾದ್ದನ್ನು ಓದುತ್ತ ಕುಳಿತರೆ ಉತ್ತಮವಾದ್ದನ್ನು ಓದುವುದಕ್ಕೆ ಕೊಡಬಹುದಾದ ಕಾಲ ನಷ್ಟ. ಸಣ್ಣದನ್ನು ಓದಿದರೆ ದೊಡ್ಡದನ್ನು ಓದುವ ಅಪೇಕ್ಷೆ ಕ್ಷೀಣಿಸುತ್ತದೆ": ಈ ಪ್ರಕಾರದ ಉಪದೇಶವನ್ನು ಉಸುರುವುದರಲ್ಲಿ ಅವನಿಗೆ ದಣಿವೇ


ತೋರದು. ಆದರೆ ಹೆಚ್ಚು ಮಂದಿ ಕಲೆಯ ಹತ್ತಿರಕ್ಕೆ ಹೋಗುವುದು ವಿದ್ಯಾ ಪ್ರೌಢಿಮೆಗಲ್ಲ, ವಿಮರ್ಶನ ಕೀರ್ತಿಗಲ್ಲ; ಸೌಂದರ್ಯ ಪರಿಚಯಕ್ಕಾಗಿ, ಆನಂದಾನುಭವಕ್ಕಾಗಿ. ಕಟ್ಟು ಕಟ್ಟಳೆ ಸಿಸ್ತು ಶಿಕ್ಷಣಗಳ ಹಾವಳಿ ಹೆಚ್ಚಾದಲ್ಲಿ ಸೌಖ್ಯಕ್ಕೆ ಕುಂದು. ಆದ್ದರಿಂದ ಲ್ಯಾಮ್ ಹ್ಯಾರಿಸನ್ನರ ತೀವ್ರ ಮಾರ್ಗಗಳ ನಡುವಣ ಸುವರ್ಣ ಮಧ್ಯಮಾರ್ಗ ಸೂಕ್ತವಾದ್ದು. ಜಾನ್ ಮಾರ್ಲಿ ಸೂಚಿಸುವಂತೆ ಮೊದಲುಮೊದಲು ಕ್ಲುಪ್ತವಾದ ಒಂದು ಕ್ರಮವನ್ನು ಹಿಂಬಾಲಿಸಿ, ಮುಂದುವರಿದಂತೆ ಆ ಕ್ರಮವನ್ನು ಸಡಿಲಿಸಿಕೊಳ್ಳುವುದು ರುಚಿಪೋಷಣೆಗೆ ಅತ್ಯುಪಕಾರ. ನೈಸರ್ಗಿಕ ಶಕ್ತಿ ನಮ್ಮಲ್ಲಿರುವುದನ್ನು ಅರಿತುಕೊಳ್ಳುವುದು ಪ್ರಥಮ ಕರ್ತವ್ಯ; ಆದರೆ ಅಷ್ಟೇ ಸಾಲದು. ಜ್ಞಾನಾರ್ಜನೆಯೂ ಅದರಷ್ಟೇ ಮುಖ್ಯವಾದ ಅಂಶ. ಪ್ರಾಚೀನ ಲಾಕ್ಷಣಿಕರು ಅಪ್ಪಣೆ ಕೊಟ್ಟಿರುವಂತೆ "ವೃದ್ಧ ಸೇವೆ" ಬಹು ಆಗತ್ಯ. ಹಿರಿಯರಲ್ಲಿ ಬಲ್ಲವರಲ್ಲಿ ಅನುಭವಶಾಲಿಗಳಲ್ಲಿ ಹೋಗಿ ಕಲಿತಷ್ಟೂ ಮೇಲು. ಎಷ್ಟೋ ಗಡುಸಾದ ವಿಷಯ ಮರ್ಮಜ್ಞನ ಮುಖದಿಂದ ಬಿದ್ದ ಒಂದು ಮಾತಿನಲ್ಲಿ ಸುವ್ಯಕ್ತವಾಗುತ್ತದೆ. ಅಂದರೆ ಹೀಗೆ ನಿರೂಪಿಸಿರುವ ಕಲಾವ್ಯಾಸಂಗ ಶಾಲೆಯ ವ್ಯಾಸಂಗದಂತಲ್ಲ. ಶಾಲೆಯ ವಿದ್ಯಾಭ್ಯಾಸದಲ್ಲಿ ಬಿಡಲಾಗದ ಬಿಗಿಬಿಕ್ಕಟ್ಟು ಒತ್ತಾಯ ಕ್ಲುಪ್ತತೆ ಏಕರೀತಿಗಳನ್ನು ಕಲಾಭ್ಯಾಸದಲ್ಲಿ ತಕ್ಕಮಟ್ಟಿಗೆ ಬಿಟ್ಟುಬಿಡಬಹುದು. ಕಲಾವ್ಯಾಸಂಗವನ್ನು ಆದಷ್ಟು ಹಿತವಾಗಿಯೂ ಉಲ್ಲಾಸಕರವಾಗಿಯೂ ಸುಸೂತ್ರವಾಗಿಯೂ ಮಾಡಿಕೊಳ್ಳಲು ಅಭ್ಯಂತರವಿಲ್ಲ. ಆದರೆ ಯಾವ ಸಂಪ್ರದಾಯವೂ ಇಲ್ಲದಿದ್ದರೆ ಗಾಳಿಯಲ್ಲಿ ತೂರಾಡುವ ತರಗೆಲೆಯಂತೆ ಆತಂಕಕ್ಕೆ ಈಡಾಗಬಹುದು ಅಂತರ್ಯ: ಗುರಿ

ಯಿಲ್ಲ, ನೆಲೆಯಿಲ್ಲ, ಎಲ್ಲಿಗೋ ಹಾರುವುದು, ಮತ್ತೆಲ್ಲಿಯೋ ಇಳಿಯುವುದು : ಇಂತಾದರೆ ಮುಕ್ತಿಯೆಂತು ?


ಅಲ್ಲದೆ ದಿನಚರಿಯ ಸಾಮಾನ್ಯ ಬದುಕಿನಲ್ಲಿ ಕೆಲವು ಸ್ಥಿತಿಗತಿಗಳಿಗೆ ಅಲ್ಪಸ್ವಲ್ಪ ಗಮನಕೊಟ್ಟಲ್ಲಿ ರುಚಿ ಬೆಳೆಯುವುದಕ್ಕೆ ಬೇಕಾದಷ್ಟು ಅವಕಾಶ ಉದ್ಭವವಾಗುತ್ತದೆ. ಮನೆಯ ಚೊಕ್ಕಟ ಶುಭ್ರ, ಬಟ್ಟೆ ಬಣ್ಣಗಳ ಆಯ್ಕೆ, ಒಡವೆ ತೊಡವೆಗಳ ನಮೂನೆ, ಸಾಮಾನು ಸರಂಜಾಮುಗಳ ಸವರಣೆ, ತೋಟ ತುಡಿಕೆಗಳ ವ್ಯವಸ್ಥೆ, ಎಲ್ಲದರಲ್ಲಿಯೂ ಸಂತತವಾಗಿ ರುಚಿಯ ಪ್ರಯೋಗಕ್ಕೆ ಅನುವುಂಟು. ಕೀಳು ರುಚಿ, ಸಾಮಾನ್ಯ ರುಚಿ, ಮೇಲು ರುಚಿ : ಇವುಗಳ ಸ್ವರೂಪವನ್ನು ಇಲ್ಲಿ ಕೊಟ್ಟಿರುವ ಪಟಗಳಲ್ಲಿ ಗುರ್ತಿಸಬಹುದು. ಪ್ರತಿಯೊಂದು ಪಟದಲ್ಲಿಯೂ ಒಂದೊಂದು ಪದಾರ್ಥದ ಹಲವು ವೈಖರಿಯ ಚಿತ್ರಗಳಿವೆ: ಒಂದು ಬಹಳ ಆಡಂಬರದಿಂದ ಕೂಡಿ ಕಣ್ಣಿಗೆ ಹೊಡೆಯುವಷ್ಟು ಅಹಿತವಾಗಿದೆ ; ಇನ್ನೊಂದು ಮಿತವಾಗಿ ಸಾಧಾರಣವಾಗಿದೆ ; ಮತ್ತೊಂದರಲ್ಲಿ ಪ್ರತಿಭಾಗವೂ ಹದವಾದ ಪರಿಮಾಣದಲ್ಲಿದ್ದು ಅತಿ ಸುಂದರವಾಗಿದೆ. ಓದುಗರು ಅವನ್ನು ಪರೀಕ್ಷಿಸಿ ತಮಗೆ ಒಪ್ಪಾದುದನ್ನು ಕಂಡುಹಿಡಿದು, ತಮ್ಮ ಅಭಿಪ್ರಾಯವನ್ನು ಇತರರೊಡನೆ ಸಕಾರಣವಾಗಿ ಚರ್ಚಿಸಲೆಂಬುದು ಈ ಚಿತ್ರಗಳನ್ನು ಪ್ರಕಟಿಸಿರುವುದರ ಆಶಯ.










































೭ ಫಲ ನಿರೂಪಣೆ

ದೃಢಕಾಯರಾದ ಯುವಕ ಯುವತಿಯರ ಸಂಖ್ಯೆ ಹೆಚ್ಚಿದರೆ ಅವರಿಗೆ ಆರೋಗ್ಯ, ಸಮಾಜಕ್ಕೆ ಸಂಪತ್ತು, ದೇಶಕ್ಕೆ ಧೈರ್ಯ, ಅಲ್ಲವೆ? ರುಚಿ ಶುದ್ಧವಾದ ರಸಿಕರ ಸಂಖ್ಯೆ ಹೆಚ್ಚಿದರೆ ಅವರಿಗೆ ಸೌಖ್ಯ, ಕಲೆಗೆ ಕ್ಷೇಮ, ಸಮಾಜಕ್ಕೆ ಶ್ರೇಯಸ್ಸು. ಸಾರ್ವಜನಿಕ ಸೊತ್ತಾದ ಕಲೆಯನ್ನು ಜತನಮಾಡಿಕೊಂಡು ಬರುವುದು ಪ್ರತಿಯೊಂದು ತಲೆಮಾರಿಗೂ ಪಿತೃಋಣ ದೇವಋಣದಂತೆ ಒಂದು ಋಣ; ಅದನ್ನು ಇಲ್ಲವೆನ್ನಲಾಗದು, ಉಪೇಕ್ಷಿಸಲಾಗದು, ತೀರಿಸಲೇಬೇಕು. "ಒಬ್ಬ ಮನುಷ್ಯನನ್ನು ಕೊಂದರೆ ಒಂದು ಶರೀರವನ್ನು ಕೊಂದಂತೆ; ಒಂದು ಕಾವ್ಯವನ್ನು ನಾಶಮಾಡಿದರೆ ಒಂದು ಆತ್ಮವನ್ನು ನಾಶಮಾಡಿದಂತೆ!" ಎಂಬ ಮಿಲ್ಟನ್ ಕವಿಯ ಉಕ್ತಿ ಅಕ್ಷರಶಃ ಸತ್ಯ. ಪ್ರಾಚೀನ ರೋಮನರು ಒಂದು ಸಾರಿ ಈಜಿಪ್ಟ್ ಗ್ರೀಸ್ ಮೊದಲಾದ ರಾಜ್ಯಗಳನ್ನು ಗೆದ್ದು ಹಿಂತಿರುಗುವಾಗ, ಹೂಜಿ ಬಟ್ಟಲು ಹರಿವಾಣ ಗಡಿಗೆ ಕಂಭ ವಿಗ್ರಹ ಮುಂತಾದ ಅಪೂರ್ವ ಕಲಾಸಂಪತ್ತನ್ನು ಬಂಡಿಗಳಲ್ಲಿ ತುಂಬಿಕೊಂಡು ಬಂದರಂತೆ. ಅದರ ವಿಚಾರದಲ್ಲಿ ಸೇನಾನಾಯಕ ಬಂಡಿಯ ಕಾವಲುಗಾರರಿಗೆ ಈ ಆಜ್ಞೆಯನ್ನು ಇತ್ತಿದ್ದನಂತೆ: "ವಸ್ತುಗಳಲ್ಲಿ ಯಾವುದಾದರೂ ಹಾಳಾದರೆ ಹಾಳುಮಾಡಿವದನು ಅದಕ್ಕೆ ಸಮನಾದ ಬದಲು ಮಾಲನ್ನು ತಂದುಕೊಡಬೇಕು." ರಸಿಕಾಗ್ರೇಸರ ಚಕ್ರವರ್ತಿ ಆ ರೋಮನ್ ಯೋಧವರ! ಜಕಣಾಚಾರಿ ಕೊರೆದ ಪ್ರತಿಮೆ ಪ್ರಮಾದವಶಾತ್ ಮುರಿದು ಬಿದ್ದರೆ ಅದಕ್ಕೆ ಸರಿದೂಗುವ ಪ್ರತಿಮೆಯನ್ನು ಸೃಷ್ಟಿಸುವ

ರೂವಾರಿ ಯಾರಿದ್ದಾರೆ? ಅದರ ಅನುಕರಣವಾದ ವಿಗ್ರಹವನ್ನು ಒಂದುಪಕ್ಷ ತಯಾರುಮಾಡಿದರೂ ಅದು ಈ ಕಾಲದ ಕಲೆಗಾರನದೇ ಹೊರತು ಎಂದಿಗೂ ಜಕಣಾಚಾರಿಯದಲ್ಲ. ರಸಿಕತನ ಲೋಕದಮೇಲೆ ಅಧಿಕಾಂಶದಲ್ಲಿ ಪ್ರಕಾಶವಾಗಬೇಕು, ಕಲೆಯ ಭದ್ರತೆಗಾಗಿ.

ಅಂದರೆ " ಕಲೆ, ಕಲೆ "ಯೆಂದು ಸದಾ ಪಾರಾಯಣಗೈಯುತ್ತ, ಇತರ ಎಲ್ಲ ಹವ್ಯಾಸವನ್ನೂ ತಾತ್ಸಾರಗೈಯುವ ದುರಭ್ಯಾಸವುಂಟು ಕೆಲವು ಕಲಾವಿದರಲ್ಲಿ. ಅದು ಹೊಲ್ಲ. ರುಚಿಯನ್ನು ಬೆಳೆಸಿಕೊಳ್ಳಬೇಕಾದುದು ಕಲೆಗಾಗಿ ಮತ್ತು ಜೀವನಕ್ಕಾಗಿ. ಬಾಳಿಗೆ ಬೆನ್ನು ತಿರುಗಿಸಿ ಕುಳಿತುಕೊಳ್ಳಿ ಎಂದು ಉಪದೇಶಿಸುವ ತತ್ವ ನಮಗೆ ಬೇಡ. ಪ್ಲಿನಿ ಎಂಬವನು ಯಾವುದೋ ಒಂದು ಗ್ರೀಕ್ ಗ್ರಂಥವನ್ನು ಪಠನಮಾಡುತ್ತಿದ್ದನಂತೆ, ವೆಸೂವಿಯಸ್ ಅಗ್ನಿಪರ್ವತ ಐದು ಪಟ್ಟಣಗಳನ್ನು ಭಸ್ಮಮಾಡುತ್ತಿರುವುದನ್ನು ಲಕ್ಷಿಸದೆ! ರೋಮ್ ನಗರ ಹತ್ತಿ ಉರಿಯುತ್ತಿದ್ದಾಗ ಚಕ್ರವರ್ತಿ ನೀರೋ ಪಿಟೀಲು ಬಾರಿಸುವುದರಲ್ಲಿ ಮಗ್ನನಾಗಿದ್ದನಂತೆ! ಅವರಂತೆ ಕಲೆ ನಮಗೂ ಅತ್ಯಗತ್ಯ; ಆದರೆ ಅವರ ಕಲಾಲಂಪಟತೆ ನಮಗೆ ಮಾರ್ಗದರ್ಶಿಯಲ್ಲ.

ಪಕ್ವವಾದ ರುಚಿನಾಗರಿಕತೆಯ ಹೆಗ್ಗುರುತು. ನಡೆ ನುಡಿ ಆಚಾರ ವ್ಯವಹಾರ ಎಲ್ಲದರ ಮೇಲೆಯೂ ಒಳ್ಳೆಯ ರುಚಿ ತನ್ನ ಮುದ್ರೆಯನ್ನು ಒತ್ತುತ್ತದೆ. ಹಾಕುವ ಬಟ್ಟೆ, ಆಡುವ ಮಾತು, ಇಡುವ ಊಟ, ಕೊಡುವ ಉಪಚಾರ, ಮಾಡುವ ಕೆಲಸ,—ಸಂಸ್ಕೃತನಾದ ಗ್ರಹಸ್ಥನಿಗೆ ಇವಾವುದರಲ್ಲಿ ಯುಕ್ತತೆಯ ಪರಿಜ್ಞಾನ ಆವಶ್ಯಕ, ಯಾವುದರಲ್ಲಿ ಅನಾವಶ್ಯಕ? ರುಚಿಗೂ ಶೀಲಕ್ಕೂ ನಿಕಟ ಸಂಬಂಧ. ಕೆಟ್ಟಚಾಳಿ ಎಂಬುದು

ಕೆಟ್ಟ ರುಚಿಯ ಸ್ಪಷ್ಟ ಕುರುಹು. ಅನುಸರಿಸುವ ತತ್ವ, ಆದರ್ಶ; ಪೂಜಿಸುವ ದೇಶ, ದೇವರು: ಎಲ್ಲವೂ ಆವರವರ ರುಚಿಯ ಮೇಲೆ ನಿಂತಿಲ್ಲವೆ? ಆದ್ದರಿಂದ ಮಾನವನ ನೈತಿಕ ಪಾರಮಾರ್ಥಿಕ ಜೀವನದಲ್ಲಿಯೂ ರುಚಿಗೆ ಪ್ರವೇಶವುಂಟು. ರಸ್ಕಿನ್ ಈ ಮಾತನ್ನು ಒತ್ತಿ ಉಚ್ಚರಿಸಿದ್ದಾನೆ: "ರುಚಿ ಶೀಲದ ಒಂದು ಭಾಗ ಅಥವಾ ಅಂಕಿತವೇ? ಅಲ್ಲ; ರುಚಿಯೇ ಶೀಲ." ಒಬ್ಬ ಮನುಷ್ಯನ ಗುಣಶೀಲಗಳನ್ನು ಒರೆಹಚ್ಚಬೇಕಾದರೆ ಬೇರೆ ಯಾವ ತನಿಖೆಯೂ ಬೇಡ; ಅವನು ಯಾವುದಕ್ಕೋಸ್ಕರ ಹಂಬಲಿಸುತ್ತಾನೆ? ಯಾವುದು ಅವನಿಗೆ ಪ್ರಿಯವಾದುದು? ಯಾವುದರಿಂದ ಅವನಿಗೆ ಮರಣಾನಂದ? ಎಂಬುದನ್ನು ಕೇಳಿ ತಿಳಿದುಕೊಂಡರೆ ಸಾಕು. ನಾಗಸ್ವರವನ್ನು ಆಲಿಸಿ ನೃತ್ಯವೆಸಗೀತೆ ನಾಯಿ! ವೀಳೆಯದೆಲೆ ಇಲ್ಲವೆಂದು ಇಳಿಮುನವಾಗುವುದೇ ಚೇಳು! ಪಚ್ಚೆತೆನೆಯ ಕುಚ್ಚೆಂದು ಹೆಚ್ಚುವುದೆ ಗುಬ್ಬಚ್ಚಿ! ಬರ್ಕನ ವಚನವೊಂದು ಸಾರುತ್ತೆ: ದುರ್ಗುಣವನ್ನು ಸುಗುಣವನ್ನಾಗಿ ಮಾರ್ಪಡಿಸಲು ಒಳ್ಳೆಯ ರುಚಿಗೆ ಸಾಮರ್ಥ್ಯವಿಲ್ಲ; ಆದರೆ ಅದು ಸಂತಸಕರವಾದ ಸಿಹಿ ಮಾತುಗಳಲ್ಲಿ ಸುಗುಣಕ್ಕೆ ಶಿಫಾರಸು ಹೇಳುತ್ತದೆ." ಸುಪುಷ್ಟವಾದ ಸೂಕ್ತರುಚಿ ಸದ್ಗುಣದ ಸೇವಕ. ಸುರುಚಿ ಬೆಳೆದು ನಮ್ಮ ಜನ ಜನಪದ ಜನ್ಮಭೂಮಿ ಸುರುಚಿರವಾಗಲಿ!

೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ,
ಬಿ.ಎ., ಎಂ., ಬಿ.ಬಿ.ಎಸ್.

೨೧. ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್,
ಎಂ.ಎ., ಪಿಎಚ್.ಡಿ.

೨೨. ಶಿಶುವಿಹಾರಗಳು—ಸಿ. ರಂಗಾಚಾರ್,
ಬಿ.ಎಸ್‌ಸಿ., ಎಂ.ಎಡ್.

೨೩. ಸಂಖ್ಯೋದ್ಯಾನ—*ಬಿ. ಸೀತಾರಾಮಶಾಸ್ತ್ರಿ, ಎಂ.ಎ.

೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.

೨೫. ಅಜಂತ ಮತ್ತು ಎಲ್ಲೋರ—ಡಾ|| ಎಂ. ಎಚ್. ಕೃಷ್ಣ,
ಎಂ.ಎ., ಡಿ.ಲಿಟ್.

೨೬. ಸಾರಜನಕದ ಮಹತ್ವ—ಎಚ್. ಸುಬ್ಬಜೋಯಿಸ್,
ಎಂ.ಎಸ್‌ಸಿ.

೨೭. ಭಾಸ—ಎಚ್.ಎಲ್. ಹರಿಯಪ್ಪ, ಎಂ.ಎ.

೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—*
ಎಂ. ಯಾಮುನಾಚಾರ್ಯ, ಎಂ.ಎ.

೨೯. ಸರ್ವಜ್ಞ ಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦. ರಕ್ತ—*ಡಿ. ಶಾಮಣ್ಣ, ಬಿ.ಎ., ಎಂ.ಬಿ.ಬಿ.ಎಸ್.

೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.

೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

೩೩. ಗಣಿತಶಾಸ್ತ್ರದ ಸ್ವರೂಪ—
ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.

೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.

೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.

೩೭. ಹಿಂದು ಮುಸ್ಲಿಮ್ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.

೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರಿ
ಎಂ.ಎ.

೩೯. ಮಕ್ಕಳ ಭಾವಜೀವನ-ಬಿ. ಕುಪ್ಪುಸ್ವಾಮಿನಾಯ್ಡು, ಎಂ.ಎ.
೪೦. ಸಹಕಾರ-ಎಸ್. ಗೋಪಾಲಸ್ವಾಮಿ, ಎಂ.ಎ.
೪೧. *ನಯಸೇನ-ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. *ಕೌಟಿಲ್ಯ-ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩. ತೆಲುಗು ಚಾಟುಪದ್ಯಗಳು-ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು-ಎಚ್. ಕೃಷ್ಣರಾವ್, ಎಂ.ಎ.
೪೫. *ಲಕ್ಷ್ಮೀಶ-ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. ರುಚಿ-ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು-ಡಿ. ಎಚ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು-ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್. ಬಿ.
೪೯. ಮುದ್ದಣ-ಟಿ. ಎಸ್. ಶಾಮರಾವ್, ಬಿ.ಎ. (ಆನರ್ಸ್)
೫೦. *ಐವರು ಪ್ರಸಿದ್ಧರಾದ ಭೌತವೈಜ್ಞಾನಿಕರು- ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.

* ಈ ಪುಸ್ತಕಗಳು ಮುಗಿದುಹೋಗಿವೆ.

೫೧. *ಕೃತಕ ರೇಷ್ಮೆ-ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. *ಚೀನರ ಇತಿಹಾಸ ಮತ್ತು ನಾಗರಿಕತೆ-ಎಸ್. ವೆಂಕಟ ದೇಶಿಕಾಚಾರ್, ಎಂ. ಎ.
೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು-ಎಸ್. ಲಕ್ಷ್ಮೀ ನರಸಿಂಹನ್, ಎಂ.ಎ.
೫೪. *ಆಹಾರ-ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ
೫೫. *ಇಬ್ಸನ್ನಿನ ಕೆಲವು ನಾಟಕಗಳು-ಎಸ್. ಮಂಜನಾಥ್, ಎಂ. ಎ.
೫೬. ಶಬ್ದಪ್ರಪಂಚ-ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.
೫೭. ಪ್ರಜಾಭಿಪ್ರಾಯ-ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್. ಬಿ.

ಸಾಧಾರಣ ಪ್ರತಿ ೨ ಆಣೆ, ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ, ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,

ಯೂನಿವರ್ಸಿಟಿ ಆಫೀಸ್, ಮೈಸೂರು